ಅಪರಂಜಿ

ಮೇ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವು

ಬಿ.ಆರ್. ನಾಗೇಶ್

ವೈ ನಾರಾಯಣ ಶರ್ಮ

ನಾಗೂಶ್ರೀ ಸೂರಿ

ಶ್ರೀಮತಿ ಅರುಣಾ ಆರ್. ಕಾರಂತ್

ಅಣ್ಣಾಸ್ವಾಮಿ ಮೊದಲಿಯಾರ್

ಎಂ.ಎಸ್.ಕೆ.

ಟೀಯಸ್ಸಾರ್ರಾವ್

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು- 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ಮೇ - 2000 ಸಂಚಿಕೆ -8

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

ಪಾಕಿಸ್ತಾನದಲ್ಲಿ ಮಾನವ ಹಕ್ಕು ಸ್ಥಿತಿ ಚಿಂತಾಜನಕ

- ಸುದ್ದಿ

ಅಲ್ಲಿ 'ಮಾನವ ಹಕ್ಕು' ಯಾವಾಗ ಇತ್ತು??

★★★

ಬೆಟ್ಟಿಂಗ್ ಹಗರಣದಲ್ಲಿ ಕ್ರೋನಿಯೆ

- ಕ್ರೀಡಾ ಸುದ್ದಿ

ಇದೂ ಒಂದು ಕ್ರೀಡೆಯೆ??

★★★

ಮಾತುಕತೆಗೆ ನಾವು ಸಿದ್ಧ

- ಮುಷರಫ್

ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ತಿ!!

★★★

ಸೆಷನ್ಸ್ ನ್ಯಾಯಾಧೀಶ ಸೇವೆಯಿಂದ ವಜಾ

- ಸುದ್ದಿ

ಬೇಲಿಯೇ ಹೊಲ ಮೇಯಿತು

★★★

ಸೆರೆಮನೆಗೆ ಲಾಲೂ; ರಾಬ್ಡಿ ದೇವಿಗೆ ಜಾಮೀನು

- ಪತ್ರಿಕೆ

ಮಹಿಳೆಯರ ಉನ್ನತಿ ಎಂದರೆ ಇದೇ!!

★★★

ನವಾಜ್ ಷರೀಫ್‌ಗೆ ಜೀವಾವಧಿ ಶಿಕ್ಷೆ

- ಸುದ್ದಿ

ಕ್ಲಿಂಟನ್ ಭೇಟಿಯಿಂದ ಚರಿತ್ರೆ ಮರುಕಳಿಸಲಿಲ್ಲ!!

★★★

ದಿನವಿಡೀ ಪ್ರಸಾರವಾಗುವ 'ಚಂದನ' ಕನ್ನಡ ಚಾನಲ್

- ಸುದ್ದಿ

ಈ ಹೆಸರನ್ನು ವೀರಪ್ಪನ್ ಸಲಹೆ ಮಾಡಿದ್ದನೆಂಬುದು ಶುದ್ಧ ಕುಹಕ!!

★★★

ರಾಮಾಯಣ ಪರೀಕ್ಷೆ; ಮುಸ್ಲಿಂ ವಿದ್ಯಾರ್ಥಿ ಪ್ರಥಮ ರ್‍ಯಾಂಕ್

- ಪತ್ರಿಕೆ

ಮಹಾತ್ಮಾ ಗಾಂಧಿ ನಲಿದಾಡಿದರಂತೆ!!

★★★

ಹಗುರ ರೈಲು ಗುತ್ತಿಗೆಯಿಂದ ಮಲ್ಯ ಹೊರಗೆ?

- ಶೀರ್ಷಿಕೆ

ಸಮಸ್ಯೆ ತೀರ ಭಾರವಾಯಿತೇನೋ?!

★★★

ಪಡಿತರ ಅಕ್ಕಿ, ಗೋಧಿ ಬೆಲೆ ಏರಿಕೆ

- ರಾಜ್ಯ ಸರ್ಕಾರದ ನಿರ್ಧಾರ

ಕಂಪ್ಯೂಟರ್‌ಗಳನ್ನು ಕೊಳ್ಳಲು ಹಣ ಬೇಕಲ್ಲ?

★★★

ನನ್ನ ನೆನಪಿನ ಬೀರು

- ಶಿವು

ಓದಿಲ್ಲದೇ ಇರುವ ಯಾವುದಾದರೂ ಪುಸ್ತಕ ಕೈಗೆ ಸಿಗಬಹುದೇನೋ ಎಂಬ ಆಶೆಯಿಂದ ಮೊನ್ನೆ ಪುಸ್ತಕದ ಕಪಾಟುಗಳ ಮೇಲೆ ಹಾಗೇ ಕಣ್ಣಾಡಿಸುತ್ತಿದ್ದೆ. ರಾಜರತ್ನಂ ಪುಸ್ತಕಗಳ ಗುಂಪಿನಲ್ಲಿ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಪ್ರಕಟಿಸಿರುವ ''ನನ್ನ ನೆನಪಿನ ಬೀರು'' ಒಮ್ಮೆಲೇ ಕಣ್ಣಿಗೆ ಬಿತ್ತು. ಕೇವಲ ಅರುವತ್ತು ಪುಟಗಳ ತೆಳುವಾದ ಪುಸ್ತಕ ಇದು. ರಾಜರತ್ನಂ ಅವರ ಸೊಸೆ ಶೈಲಾ ಶ್ರೀಧರ್ ಅವರ ನೆರವಿನಿಂದ ಚಿ. ಶ್ರೀನಿವಾಸರಾಜು ಅವರು ಸಂಪಾದಿಸಿರುವ ಈ ಹೊತ್ತಗೆಯಲ್ಲಿ ರತ್ನರ ಹನ್ನೊಂದು ಲೇಖನಗಳು ಮೂಡಿಬಂದಿವೆ. ರತ್ನರ ಶೈಲಿಯೇ ಸೊಗಸು. Random ಚಿಂತನೆಗಳನ್ನು, ಘಟನೆಗಳನ್ನು, ಒಂದು ಲೇಖನದ ಅಚ್ಚಿನಲ್ಲಿ ಎರಕ ಹೊಯ್ದು Immensly readable ಆಗಿಸುವ ಕಲೆ ರತ್ನರಿಗೆ ಚೆನ್ನಾಗಿ ಸಿದ್ಧಿಸಿತ್ತು. ಹಿಂದೆ ಆಕಾಶವಾಣಿಯ ಸ್ಟೇಷನ್ ಡೈರೆಕ್ಟರ್ ಆಗಿದ್ದ ಶ್ರೀ ನಟೇಶ್ ಅವರ ಕುರಿತು ರಚಿಸಿರುವ pen portrait. ಬಿ.ಎಂ.ಶ್ರೀ, ಶಿವರಾಮ ಕಾರಂತ ಇವರುಗಳ ಕುರಿತು ಬರೆದ ನೆನಪಿನ ತುಣುಕುಗಳು ಇವನ್ನೆಲ್ಲಾ ಓದಿ, ಪುಸ್ತಕ ಬದಿಗಿಟ್ಟು ಕುಳಿತಾಗ ಒಂದು ಪ್ರಶ್ನೆಯ ಪಕ್ಷಿ ಹಾರಿಬಂದು ನನ್ನ ಚಿದ್ವೃಕ್ಷದ ರೆಂಬೆಯ ಮೇಲೆ ಕುಳಿತಿತು. ''ಇಂತಹ ನೆನಪುಗಳು ಹಿಂದಿನ ತಲೆಮಾರಿನ ಖ್ಯಾತ ಸಾಹಿತಿಗಳಿಗೆ ಮಾತ್ರಾ ಸೀಮಿತವೇ? ನಮ್ಮಂತಹ ಪಾಮರರಿಗೆ ಇಂತಹ ದಾಖಲಿಸಬಲ್ಲ ನೆನಪುಗಳೇ ಇರುವುದಿಲ್ಲವೇ?'' ಎಂಬ ಪ್ರಶ್ನೆಗೆ ನಾನು ಉತ್ತರ ಹುಡುಕುವುದು ಅನಿವಾರ್ಯವಾಯಿತು.

ದಶಕಗಳ ಹಿಂದಿನ ಮಾತು. ತಾಯಗರ್ಭದಂತಿದ್ದ ಸರ್ಕಾರಿ ಕಾರ್ಖಾನೆಯ ಕೆಲಸ ಬಿಟ್ಟು ಹೊರ ಪ್ರಪಂಚದ ಸವಾಲುಗಳನ್ನೆದುರಿಸಲು ಆಗತಾನೇ ಒಂದು ಸಣ್ಣ ಕೈಗಾರಿಕೋದ್ಯಮ ಪ್ರಾರಂಭಿಸಿದ್ದೆ. ಪ್ರಾರಂಭಿಸಿದಾಕ್ಷಣ ಗ್ರಾಹಕರು ಸಿಗುತ್ತಾರೆಯೇ? ಆಫೀಸಿನಲ್ಲಿ ಗಾಳಿ ಬೆಳಕು ಚೆನ್ನಾಗಿ ಬರುತ್ತಿದ್ದುದರಿಂದ ನೊಣ ಹೊಡೆಯಲೂ ಸಹಾ ಅವಕಾಶವಿರಲಿಲ್ಲ. ಕೆಲಸವಿಲ್ಲದೇ ಸೋಮಾರಿಗಳಾಗದಿರಲೆಂದು ಕೆಲಸಗಾರರಿಗೆ ಮುಂದೆ ಉಪಯೋಗಕ್ಕೆ ಬರಬಹುದಾದ ಹಲವು ಸಾಮಗ್ರಿಗಳನ್ನು ತಯಾರಿಸುವ ಕೆಲಸವನ್ನು ಕೊಟ್ಟಿದ್ದೆ. ಅಗಾಧವಾದ ಬಂಡವಾಳ ಹೂಡಿ, ಹೀಗೆ ಕೆಲಸವಿಲ್ಲದೇ ಕುಳಿತ ದಿನಗಳನ್ನು ನೆನೆಸಿಕೊಂಡರೆ ಈಗ ಹೆದರಿಕೆ ಆಗುತ್ತದೆ. ಅಂದರೆ ಆಗಿನ ಬಿಸಿರಕ್ತದ ಹುಮ್ಮಸ್ಸಿನಲ್ಲಿ ಏನೋ ಒಂದು ಹುಚ್ಚು ಧೈರ್ಯ. ಆ ಧೈರ್ಯದ ಮೇಲೆ

ಆಫೀಸಿನಲ್ಲಿ ಕುಳಿತಿದ್ದಾಗ, ಮಿತ್ರ ಪ್ರಸಾದ್ ಒಳಕ್ಕೆ ಬಂದ. ಜೊತೆಯಲ್ಲಿ ಒಬ್ಬ ತೆಳ್ಳಗೆ ಕುಳ್ಳಗಿನ ಆಸಾಮಿ. ಬಿಳೀ ಪ್ಯಾಂಟು, ಬಿಳೀ ಶರಟು, ಕೋಲು ಮುಖ. ಹಿಟ್ಲರ್ ಮೀಸೆ, ಹಣೆಯ ಮೇಲೆ ಹುಬ್ಬುಗಳ ಮಧ್ಯೆ ವಿಭೂತಿ ಬೊಟ್ಟು. 'ಇವರು ಮುರುಗಾನಂದಮ್. ಟ್ರಿಚ್ಚಿಯಿಂದ ಬಂದಿದ್ದಾರೆ. ಬಿ.ಎಚ್.ಇ.ಎಲ್. ಸಂಸ್ಥೆಯ ಸಬ್ ಕಾಂಟ್ರಾಕ್ಟಿಂಗ್ ಅಧಿಕಾರಿಗಳು. ಕೆಲವು ವಾಲ್ವ್ ಸ್ಟೆಮ್‌ಗಳು ಇವರಿಗೆ ತುರ್ತಾಗಿ ಬೇಕಂತೆ. ನೀನು ಮಾಡಿಕೊಡ್ತೀಯಾ?' ಎಂದು ನೇರವಾಗಿ ವಿಷಯಕ್ಕೆ ಬಂದ ಪ್ರಸಾದ್. ಮೊಟ್ಟಮೊದಲ ಗ್ರಾಹಕ! In real flesh and blood! ಕೆಂಪು ರತ್ನಗಂಬಳಿ ಒಂದನ್ನು ಹೊರತಾಗಿ ಇನ್ನೆಲ್ಲಾ ಉಪಚಾರಗಳನ್ನೂ ಮಾಡಿದೆ. ಅವರ ಮುಂದೆಯೇ ಕೊಟೇಷನ್ ಕೊಟ್ಟು ಅವರು ಕೇಳಿದ ರಿಯಾಯಿತಿ ತೋರಿಸಿ ಅವತ್ತೇ ಆರ್ಡರ್ ಗಿಟ್ಟಿಸಿದೆ. ಮಾರನೆಯ ದಿನ ಕಚ್ಚಾ ಸಾಮಗ್ರಿ ಕಳಿಸುವುದಾಗಿ ಹೇಳಿ ಮುರುಗಾನಂದಮ್ ಪ್ರಸಾದನೊಡಗೂಡಿ ಹೊರಟುಹೋದರು.

ಮುಂದಿನ ಮೂರು ವಾರಗಳು ನನ್ನ ಕಾರ್ಖಾನೆಯಲ್ಲಿ ಕೆಲಸವೋ ಕೆಲಸ. ಹಗಲೂ ರಾತ್ರಿ ದುಡಿದು ಕೊನೆಗೂ ಒಂದು ಸಾವಿರ ವಾಲ್ವ್ ಸ್ಟೆಮ್‌ಗಳನ್ನು ಸಿದ್ಧಪಡಿಸಿದ್ದಾಯಿತು. ಕರಾರಿನ ಪ್ರಕಾರ ಸಾಮಗ್ರಿ ಸಿದ್ಧವಾದನಂತರ ನಾವು ಮುರುಗಾನಂದಮ್‌ಗೆ ಟೆಲಿಗ್ರಾಂ ಕಳಿಸಿ ಅಲ್ಲಿಂದ ಸಿದ್ಧ ಸಾಮಗ್ರಿಗಳ ಗುಣಮಟ್ಟದ ತಪಾಸಣೆ ನಡೆಸಲು ಇನ್‌ಸ್ಪೆಕ್ಟರ್ ಒಬ್ಬನನ್ನು ಕರೆಸಿಕೊಳ್ಳಬೇಕಾಗಿತ್ತು. ಟೆಲಿಗ್ರಾಂ ಕಳಿಸಿದೆ. ಮೂರು ದಿನಗಳ ನಂತರ ಇನ್‌ಸ್ಪೆಕ್ಟರ್ ಪ್ರತ್ಯಕ್ಷನಾದ. ಗುಂಡು ಮುಖ, ಬಕ್ಕ ತಲೆ. ಈ ಗುಂಪಿನ ಜನಗಳಲ್ಲಿ ಸಾಮಾನ್ಯವಾಗಿ ಕಾಣಲಾಗದ ನಗು ಮುಖ. ಹೆಸರು ದ್ವಾರಕಾನಾಥ್. ಕನ್ನಡಿಗರೇ ಅಂತೆ. ಕೆಲಸದ ಸಲುವಾಗಿ ಟ್ರಿಚ್ಚಿಯಲ್ಲಿದ್ದೇನೆ. ಮಕ್ಕಳು ಸ್ಕೂಲು ಸೇರುವ ಹೊತ್ತಿಗೆ ಕನ್ನಡ ನಾಡಿನಲ್ಲಿ ನೆಲಸುವ ಆಸೆಯಿದೆ'' ಅಂದರು ದ್ವಾರಕಾನಾಥ್. ''ಎಷ್ಟು ಮಕ್ಕಳು?'' ಸೌಜನ್ಯದಿಂದ ಕೇಳಿದೆ. ''ಇನ್ನೂ ಮದುವೆ ಆಗಿಲ್ಲ. ಮುಂದಿನ ತಿಂಗಳು ಮದುವೆ, ಮೈಸೂರಿನಲ್ಲಿ. ಇನ್ವಿಟೇಷನ್ ಕಳಿಸುತ್ತೇನೆ ಖಂಡಿತ ಬನ್ನಿ'' ಎಂದರು ಇನ್‌ಸ್ಪೆಕ್ಟರ್ ಮಹಾಶಯರು.

'ಭಲೇ! ಫಾರ್ವರ್ಡ್ ಪ್ಲಾನಿಂಗ್ ಅಂದರೆ ಇದೇ' ಅಂದುಕೊಳ್ಳುತ್ತಾ ನಾನು ದ್ವಾರಕಾನಾಥರನ್ನು ಕಾರ್ಖಾನೆಯೊಳಕ್ಕೆ ಕರೆದೊಯ್ದೆ. ದ್ವಾರಕಾನಾಥ್ ಬಲು ಶಿಸ್ತಿನ ಆಸಾಮಿ. ಮೊದಲು ಇನ್‌ಸ್ಪೆಕ್ಟರ್ ಉಪಕರಣಗಳನ್ನು ಸರಿಯಾಗಿದೆಯೇ ಎಂದು ಪರೀಕ್ಷಿಸಿ ಅನಂತರ ತಮ್ಮ ಕೆಲಸ ಪ್ರಾರಂಭಿಸಿದರು. ನನ್ನ ಸುದೈವಕ್ಕೆ ಸಾಮಗ್ರಿಗಳೆಲ್ಲಾ ಸರಿಯಾಗಿದ್ದವು. ದ್ವಾರಕಾನಾಥ್ ಒಂದು Acceptance Report ತಯಾರಿಸಿದರು. ಅದಕ್ಕೆ ನಾವಿಬ್ಬರೂ ಸಹಿ ಹಾಕಬೇಕಾಗಿತ್ತು. ಸಹಿ ಹಾಕಲು ನಾನು ಪೆನ್ನು ತೆಗೆದೆ.

''ಸ್ವಲ್ಪ ತಡೀರಿ. ಇದು ನಿಮ್ಮ ಮೊದಲ ಆರ್ಡರ್ ಅಂತೀರ. ರಾಹು ಕಾಲದಲ್ಲಿ ಸಹಿ ಹಾಕೋದಕ್ಕೆ ಹೊರಟಿದ್ದೀರಲ್ಲಾ'' ಅಂದರು ಇನ್‌ಸ್ಪೆಕ್ಟರ್ ಮಹಾಶಯರು.

''ಈಗ ರಾಹುಕಾಲ ಅಂತ ನನಗೆ ತಿಳಿದೇ ಇರಲಿಲ್ಲ. ಪರವಾಗಿಲ್ಲಾರೀ ನೀವು. ಇದನ್ನೆಲ್ಲಾ ತಿಳ್ಕೊಂಡಿದೀರಾ'' ಅಂದೆ. ''ಅದೇನು ಮಹಾ ಕಷ್ಟ. ನಿಮಗೂ ಹೇಳಿಕೊಡ್ತೀನಿ. Mother saw Father winding the turban slowly ಅನ್ನೋ ಒಂದು ವಾಕ್ಯಾನ ನೆನಪಿನಲ್ಲಿ ಇಟ್ಕೊಂಡು ಬಿಡಿ. ಆ ವಾಕ್ಯದ ಒಂದೊಂದು ಪದಾನೂ ಒಂದೊಂದು ವಾರದ ಹೆಸರನ್ನು ಸೂಚಿಸುತ್ತೆ. Mother ಅಂದ್ರೆ Monday ಆ ರೀತಿ. ರಾಹುಕಾಲ ಯಾವಾಗ್ಲೂ ದಿನಕ್ಕೆ ಒಂದೂವರೆ ಗಂಟೆ ಮಾತ್ರ. ಬೆಳಗ್ಗೆ ಏಳೂವರೆಗೆ ಶುರು ಆಗುತ್ತೆ ಅದು. ಇಷ್ಟು ನೆನಪಿನಲ್ಲಿದ್ರೆ ಸಾಕು. ಸೋಮವಾರ ಏಳೂವರೆಯಿಂದ ಒಂಭತ್ತು, ಶನಿವಾರ ಒಂಭತ್ತರಿಂದ ಹತ್ತೂವರೆ, ಶುಕ್ರವಾರ ಹತ್ತೂವರೆಯಿಂದ ಹನ್ನೆರಡು... ಹೀಗೆ ಏಳು ದಿನಗಳಿಗೂ ರಾಹುಕಾಲದ ಸಮಯ ತಿಳಿಯಬಹುದು'' ಅಂದರು ದ್ವಾರಕಾನಾಥ್. ಸರಿ, ಮೂರು ಘಂಟೆವರೆಗೂ ಕಾದಿದ್ದು, ಅನಂತರ ಇಬ್ಬರೂ ಸಹಿ ಹಾಕಿದೆವು.

ಸಾಮಗ್ರಿ ಕಳಿಸಿ ಒಂದು ವಾರ ಆದಮೇಲೆ ನಾನೂ ಮತ್ತು ಪ್ರಸಾದ್ ಟ್ರಿಚ್ಚಿಗೆ ಹೊರಟೆವು. ಪ್ರಸಾದ್ ಸಹಾ ಕೆಲವು ಬಿಲ್‌ಗಳಿಗೆ ಪೇಮೆಂಟ್ ಪಡೆಯಬೇಕಾಗಿತ್ತು. ಬೆಂಗಳೂರಿನಿಂದ ರಾತ್ರಿ ಹೊರಟು ಬೆಳಿಗ್ಗೆ ಆರೂವರೆಗೆ ಟ್ರಿಚ್ಚಿ ಸೇರಿದೆವು. ಸ್ಟೇಷನಲ್‌ನಲ್ಲಿ ಇಳಿದ ತಕ್ಷಣ ಮಾರನೆಯ ದಿನಕ್ಕೆ ರಿಟರ್ನ್ ಟಿಕೆಟ್ ಬುಕ್ ಮಾಡಿ ಅನಂತರ ರೆಸ್ಟ್ ರೂಮಿನಲ್ಲಿ ಪ್ರಾತರ್ವಿಧಿಗಳನ್ನು ಮುಗಿಸಿ, ಬಸ್ ಹಿಡಿದು ಊರಾಚೆ ಇದ್ದ ಬಿ.ಎಚ್.ಇ.ಎಲ್. ಕಾಂಪ್ಲೆಕ್ಸ್‌ಗೆ ಹೊರಟೆವು. ದಾರಿಯಲ್ಲಿ ಬೆಟ್ಟದ ಮೇಲೆ ಕಾಣುತ್ತಿದ್ದ ದೇವಸ್ಥಾನವನ್ನು ತೋರಿಸಿ, ಪ್ರಸಾದ್ ''ಅದು ರಾಕ್ ಫೋರ್ಟ್ ಟೆಂಪಲ್. ಅಲ್ಲಿನ ಗಣಪತಿಯನ್ನ ಇಲ್ಲಿನವರು ವಿನಾಯಗರ್ ಅಂತಾರೆ'' ಅಂತ ಹೇಳಿದ. ಫ್ಯಾಕ್ಟರಿ ಸೇರಿದ ಮೇಲೆ ನೇರವಾಗಿ ಮುರುಗಾನಂದಮ್ ಅವರ ಮೇಜಿಗೆ ಹೋದೆವು. ಅವರ ಕುರ್ಚಿಯ ಮೇಲೆ ಅವರ ಸ್ಟೆನೋ ಕುಳಿತು ಫೋನಿನಲ್ಲಿ ಯಾರೊಂದಿಗೋ ಮಾತನಾಡುತ್ತಿದ್ದ. ಅಷ್ಟು ಹೊತ್ತಿಗೆ ಹೊರಗೆಲ್ಲೋ ಹೋಗಿದ್ದ ಮುರುಗಾನಂದಮ್ ಅಲ್ಲಿಗೆ ಬಂದರು. ತನ್ನ ಬಾಸ್ ಬಂದದ್ದು ನೋಡಿ ಸ್ಟೆನೋ ಸ್ವಲ್ಪವೂ ವಿಚಲಿತನಾಗಲಿಲ್ಲ. ನಿಧಾನವಾಗಿ ತನ್ನ ಸಂಭಾಷಣೆ ಮುಗಿಸಿ ಅನಂತರ ಎದ್ದು ಬಾಸಿಗೆ ಕುರ್ಚಿ ಬಿಟ್ಟುಕೊಟ್ಟು ಏನೂ ಆಗದ ಹಾಗೆ ಬಾಸಿನೊಂದಿಗೆ ಎರಡು ತಮಾಷೆ ಮಾತನಾಡಿ ತನ್ನ ಕುರ್ಚಿಗೆ ಹೊರಟ. ನನಗೋ ಆಶ್ಚರ್ಯ. ನನ್ನ ಹಿಂದಿನ ಸರ್ಕಾರೀ ಕಾರ್ಖಾನೆಯಲ್ಲಿ ಬಾಸಿನೊಂದಿಗೆ ಇಂತಹ ಸದರ ಕನಸಿನಲ್ಲೂ ಕಾಣೆವು. ಪರವಾಗಿಲ್ಲವೇ, ಇಲ್ಲಿನ ಸಂಸ್ಕೃತಿಯೇ ಬೇರೆ ಅಂದುಕೊಂಡೆ.

ಮುರುಗಾನಂದಮ್ settle down ಆದಮೇಲೆ ನಾನು ನನ್ನ ಪೇಮೆಂಟ್ ಬಗ್ಗೆ ಪ್ರಸ್ತಾಪ ಮಾಡಿದೆ. ಅವರು ಅದರ ಬಗ್ಗೆ Accounts section ನಲ್ಲಿ ವಿಚಾರಿಸಿ ಮಧ್ಯಾಹ್ನ ತಿಳಿಸುವುದಾಗಿ ಹೇಳಿ ಮುಂದಿನ ಆರ್ಡರ್‌ಗೆ ಹಲವು ಡ್ರಾಯಿಂಗ್‌ಗಳನ್ನು ಕೊಟ್ಟರು. ಸರಿ, ಮಧ್ಯಾಹ್ನ ಅಲ್ಲಿನ ಕ್ಯಾಂಟೀನಿನಲ್ಲಿ ಪ್ರಸಾದನೊಂದಿಗೆ ಊಟ ಮಾಡುತ್ತಿದ್ದಾಗ, ಪ್ರಸಾದ್ ''ಸುಮ್ಮನೆ ಪೇಮೆಂಟ್ ಕೇಳಿದರೆ ಸಾಲದು. ಸ್ವಲ್ಪ ಗೋಳು ಹೇಳಿಕೊಳ್ಳಬೇಕು ಕಣೋ. ಇಲ್ಲಾ ಅಂದರೆ ಮುಂದಿನ ವಾರ ಬನ್ನಿ ಅಂತಾರೆ'' ಅಂತ ಹಿತವಚನ ನುಡಿದ. ಊಟ ಮುಗಿಸಿ ಮಧ್ಯಾಹ್ನ ಮುರುಗಾನಂದಮ್ ಅನ್ನು ಭೇಟಿಯಾದಾಗ ನಾನು ಪ್ರಸಾದನ ಬುದ್ಧಿವಾದವನ್ನು ನೆನಪಿಸಿಕೊಂಡು ''ಸಾರ್, ಹೇಗಾದರೂ ಮಾಡಿ ಇವತ್ತೇ ನನಗೆ ಪೇಮೆಂಟ್ ಕೊಡಿಸಬೇಕು. ನಾಳೆ ನನ್ನ ಕೆಲಸಗಾರರಿಗೆ ಸಂಬಳದ ಬಟವಾಡೆ. ಎರಡೂವರೆ ಸಾವಿರ ಷಾರ್ಟೇಜ್ ಇದೆ. ನನಗೆ ಬರಬೇಕಾದ ನಾಲ್ಕು ಸಾವಿರ ಬಂದರೆ ಬಹಳ ಅನುಕೂಲ ಆಗುತ್ತೆ. ನೀವು ದೊಡ್ಡ ಮನಸ್ಸು ಮಾಡಿದರೆ ಆಗುತ್ತೆ'' ಅಂತ ಚೆನ್ನಾಗಿಯೇ ಅಂಗಲಾಚಿದೆ. ಮುರುಗಾನಂದಮ್ ಏನೂ ಉತ್ತರ ನೀಡಲಿಲ್ಲ. ಹತ್ತು ನಿಮಿಷ ಏನೋ ಕಾಗದಗಳನ್ನು ಪರಿಶೀಲಿಸಿ ಅನಂತರ ''Accounct section ಗೆ ಹೋಗಿ ಬರುತ್ತೇನೆ'' ಅಂತ ಹೇಳಿ ಹೊರಟರು. ನಾನು ಅವರ ಮೇಜಿನ ಮುಂದಿದ್ದ ಕುರ್ಚಿಯಲ್ಲಿ ಕಾಯುತ್ತಾ ಕುಳಿತೆ.

ಅರ್ಧ ಘಂಟೆ ಆದಮೇಲೆ ಮುರುಗಾನಂದಮ್ ಹಿಂತಿರುಗಿ ಬಂದರು. ತಮ್ಮ ಕುರ್ಚಿಯಲ್ಲಿ ಕುಳಿತು ಪುನಃ ಕಾಗದ ಪತ್ರಗಳನ್ನು ಪರಿಶೀಲಿಸತೊಡಗಿದರು. ಆಮೇಲೆ ಒಂದು ಬಿಳೀ ಹಾಳೆ ತೆಗೆದು ಅದರ ಮೇಲೆ ಏನನ್ನೋ ಬರೆದು ನನ್ನ ಕಡೆ ಸರಿಸಿದರು. ಹಾಳೆ ತೆಗೆದು ಓದಿದೆ. ಅದರ ಒಕ್ಕಣೆ ಹೀಗಿತ್ತು.

''ನಿನ್ನ ಪೇಮೆಂಟ್ ಇವತ್ತು ಸಿಗುವ ಹಾಗಿಲ್ಲ. ನೀನು ನಾಳೆಯೇ ಸಂಬಳ ಬಡವಾಡೆ ಮಾಡಬೇಕಾದಲ್ಲಿ ನನಗೆ ತೋರುತ್ತಿರುವ ಮಾರ್ಗ ಒಂದೇ. ನನಗೆ ನಿನ್ನೆ ಸಂಬಳ ಬಂದಿದೆ. ನಿನಗೆ ಒಪ್ಪಿಗೆಯಾದಲ್ಲಿ ನಾನು ಅದರಿಂದ ನಿನಗೆ ಎರಡೂವರೆ ಸಾವಿರ ಖಾಸಗಿಯಾಗಿ ಕೊಡುತ್ತೇನೆ. ನಿನ್ನ ಪೇಮೆಂಟ್ ನಾಳೆ ಬಂದ ಮೇಲೆ ಅದನ್ನ ನಿನಗೆ ಪೋಸ್ಟ್ ಮಾಡುವೆ. ಆ ಚೆಕ್ ಪಾವತಿಯಾದ ಮೇಲೆ ನೀನು ನನ್ನ ಸಾಲ ತೀರಿಸಬಹುದು. ತಪ್ಪು ತಿಳಿಯಬೇಡ. ನಿನ್ನ ಕಷ್ಟಕ್ಕೆ ಸ್ಪಂದಿಸಿ ಹೀಗೆ ಹೇಳುತ್ತಿದ್ದೇನೆ.''

ನನಗೆ ಒಂದೆರಡು ಕ್ಷಣ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ಆಮೇಲೆ ಸುಧಾರಿಸಿಕೊಂಡು, ''ತುಂಬಾ ಥ್ಯಾಂಕ್ಸ್ ಸಾರ್. ಆದರೆ ನೀವು ಖಾಸಗಿಯಾಗಿ ಹಣ ಕೊಡಬೇಕಾದ ಅಗತ್ಯವಿಲ್ಲ. ನನ್ನ ಸಂಬಳದ ಬಟವಾಡೆಯನ್ನ ನಾನು

ನಾಡಿದ್ದಿಗೆ ಮುಂದೂಡುತ್ತೇನೆ. ಇಂದು ಇಲ್ಲೇ ಇದ್ದು, ನಾಳೆ ಬಂದು ನನ್ನ ಚೆಕ್ ಪಡೆದು, ನಾಳೆ ಸಂಜೆ ಬೆಂಗಳೂರಿಗೆ ಹೋಗುತ್ತೇನೆ'' ಅಂತ ಹೇಳಿದೆ.

''ಇದೇ ಮೊದಲ ಸಲ ಟ್ರಿಚ್ಚಿಗೆ ಬಂದಿರೋದು ಅಂತೀರಿ. ಸಂಜೆ ರಾಕ್ ಫೋರ್ಟ್ ಟೆಂಪಲ್‌ಗೆ ಹೋಗಿ. ಸಂಜೆಯಾದಮೇಲೆ ಅಲ್ಲಿ ತಂಪಾದ ಗಾಳಿ ಬೀಸುತ್ತೆ. ಅಲ್ಲದೇ ಅದು ಬಹು ಪುರಾತನ ದೇವಸ್ಥಾನ'' ಅಂದರು ಮುರುಗಾನಂದಮ್.

ಆ ಸಂಜೆ ನಾನು ಮತ್ತು ಪ್ರಸಾದ್ ದೇವಸ್ಥಾನಕ್ಕೆ ಹೋದೆವು. ಪೂಜೆ ಮಾಡಿಸುವಾಗ ಅರ್ಚಕರು ''ಆರಪೇರ್ಲೆ?'' ಅಂತ ಕೇಳಿದಾಗ ಪ್ರಸಾದ್ ''ಕಡವಳೆ ಪೇರ್ಲೇ ಪಣ್ಣುಡುಂಗೋ'' ಅಂತ ಕೇಳಿದ. ತಮಿಳಿನಲ್ಲಿ ಕಡವಳೆ ಅಂದರೆ ದೇವರು ಅಂತ ನನಗೆ ಆಗಲೇ ತಿಳಿದದ್ದು. ಅರ್ಚನೆ ಮುಗಿದು ಮಂಗಳಾರತಿ ತೆಗೆದುಕೊಂಡು, ಕುಂಕುಮ, ವಿಭೂತಿ ಧರಿಸಿ ಹೊರಗೆ ಬಂದು ನಾವಿಬ್ಬರೂ ಅಲ್ಲಿನ ಬಂಡೆಯೊಂದರ ಮೇಲೆ ಕುಳಿತೆವು. ದೂರದ ಹರಹಿನಲ್ಲಿ ತಿರುಚ್ಚಿಯ ದೀಪಗಳು, ಕತ್ತಲ ಚಾಪೆಯ ಮೇಲೆ ಹರಡಿದ್ದ ಮಣಿ ಸರಗಳಂತೆ ಕಾಣುತ್ತಿದ್ದವು. ತಂಪಾದ ಗಾಳಿ ಮುಖವನ್ನು ನೇವರಿಸಿ ದಿನದ ಆಯಾಸವನ್ನೆಲ್ಲಾ ಪರಿಹರಿಸುವುದರಲ್ಲಿ ಸಫಲವಾಗಿತ್ತು. ಆಗಸದಲ್ಲಿ ಚುಕ್ಕಿಗಳು ಅಲ್ಲೊಂದು ಇಲ್ಲೊಂದು ಮಿನುಗಲು ಪ್ರಾರಂಭಿಸಿದ್ದವು. ಮೇಲಿನ ದಟ್ಟ ನೀಲಿಯ ಆಕಾಶದ ವಿಶಾಲತೆಯನ್ನು ನಿಟ್ಟಿಸಿ ನೋಡುತ್ತಿದ್ದಂತೆ, ಮಧ್ಯಾಹ್ನ ಭೇಟಿ ಮಾಡಿದ ವ್ಯಕ್ತಿಯ ಹೃದಯ ವೈಶಾಲ್ಯ ಇದಕ್ಕೆ ಕಡಿಮೆಯೇನಿಲ್ಲ ಅನ್ನಿಸಿತು ನನಗೆ.

ಕಲ್ಲು

ಅಮೃತ ಹಸ್ತವು ಬಂದು ಅಲ್ಲಲ್ಲಿ ಒಂದೊಂದು
ಕಲ್ ಇಡುವ ಗುಲ್‌ಹಬ್ಬ ಸೊಲ್ ಸಮಾರಂಭ
ಅಲ್ಲಿ ಬಿದ್ದಿರುವ ಹಾಳೆ ಕಲ್ಲು ಇಲ್ಲಿಗೆ ಬರಲು
ಎಲ್ಲಿರದ ಸಡಗರವು, ಹೊಸ ಹಸೀ ಜಂಭ!

ಕಲ್ ಇಡುವ ಕಲೆಯಲ್ಲಿ ಸಿದ್ಧ ಹಸ್ತರು ಕೆಲರು
ಕಲ್ ಹಾಕುವುದರಲಿ ಕೆಲರ ನೈಪುಣ್ಯ
ಕಲ್ ತೂರಿ ಸಾಧಿಸುವ ನವ್ಯ ಯೋಗಕೆ ಶರಣು
ಕಲ್ಲಿನಾ ಯುಗದತ್ತ ಬಿರುಸಿನಾ ಪಯಣ

– ವಿ.ಜಿ.ಭಟ್ಟ

ಗ್ಯಾಸ್ ಅಂಡೆ ಶಿಕ್ಷಣ

– ಬಿ.ಆರ್. ನಾಗೇಶ್

ನಾವು ಸಣ್ಣದಿರುವಾಗ ತಕಲಿಯಿಂದ ನೂಲು ತೆಗೆದು, ದೇಶಸೇವೆ ಮಾಡುತ್ತಲೇ, ಬೇರೆ ಬೇರೆ ವಿಷಯಗಳನ್ನು ಅಭ್ಯಸಿಸುತ್ತಿದ್ದೆವು; ತೆಂಗಿನ ಸೋಗೆಯಿಂದ ಕಡ್ಡಿಗಳನ್ನು ಬೇರ್ಪಡಿಸುತ್ತಾ ಭೂಗೋಳ, ಚರಿತ್ರೆ, ಭಾಷೆ ಗಣಿತ, ವಿಜ್ಞಾನ ಮುಂತಾದವುಗಳನ್ನು ಕಲಿಯುತ್ತಿದ್ದೆವು. ತೆಂಗಿನ ಮರಗಳು ಬೆಳೆಯುವ ಸ್ಥಳಗಳು ನಮ್ಮ ದೇಶದಲ್ಲಿ ಎಲ್ಲೆಲ್ಲಿ ಇವೆ - ಪ್ರಪಂಚದ ಯಾವ ದೇಶಗಳಲ್ಲಿ ಅದು ಬೆಳೆಯುತ್ತದೆ; ಯಾರ ಕಾಲದಲ್ಲಿ ಪ್ರಜೆಗಳಿಗೆ ತೆಂಗಿನಕ್ಕಾ ಧರ್ಮಾರ್ಥವಾಗಿ ಸಿಗುತ್ತಿತ್ತು; ತೆಂಗಿನ ಗರಡೆಯಿಂದ ಅಂಗಿಗುಬ್ಬಿ, ಮನುಷ್ಯನ ತಲೆ, ಹೆಂಗಸರಿಗಾಗಿ ಸರ - ಇತ್ಯಾದಿಗಳನ್ನು ತಯಾರಿಸುವ ಕ್ರಮದ ವಿವರಣೆಗಳಿಂದ ಭಾಷೆ ಬೆಳೆಯುತ್ತಿತ್ತು; ಒಂದು ತೆಂಗಿನ ಕಾಯಿಗೆ ಒಂದಾಣೆಯಾದರೆ ನೂರು ತೆಂಗಿನ ಕಾಯಿಗಳಿಗೆ ಒಟ್ಟು ಕ್ರಯವೇನು - ಇದರಲ್ಲಿ ವ್ಯಾಪಾರಿಯ ಕಮಿಷನ್ ಎಷ್ಟು - ಮುಂತಾದ ವಿಷಯಗಳಿಂದ ಗಣಿತದ ಪಾಠವಾಗುತ್ತಿತ್ತು. ಅದೊಂದು ವಿಚಿತ್ರ ರೀತಿಯ ವಿದ್ಯಾಭ್ಯಾಸ. ತೆಂಗಿನ ಸೋಗೆಯನ್ನು ಶಾಲೆಗೆ ತಂದು, ಅದರ ಬಿಡಿ ಬಿಡಿ ಗರಿಗಳನ್ನು ಚೂರಿಯಿಂದ ಸಫಾಯಿಗೊಳಿಸಿ, ಕಡ್ಡಿಯನ್ನು ಬೇರ್ಪಡಿಸಿ, ಒಂದು ಪೊರಕೆಯನ್ನು ತಯಾರಿಸುವುದರ ಒಳಗೆ, ಸಕಲವನ್ನು ಕಲಿಯುತ್ತಿದ್ದ ನಮ್ಮ ತಲೆಗಳಿಗೆ ಹೆಚ್ಚು ಕಡಿಮೆ ತೆಂಗಿನಕ್ಕಾ ಆಕಾರ ಬಂದದ್ದು ಆಶ್ಚರ್ಯಕರವಾಗಿರಲಿಲ್ಲ. ಒಂದು ವಸ್ತುವನ್ನು ಮುಟ್ಟಿ, ತಟ್ಟಿ, ಕಣ್ಣಿಗೊತ್ತಿ ಕಿವಿಗೆ ಆನಿಸಿ, ಮೂಸಿ ರುಚಿ ನೋಡಿ, ಎತ್ತಿ ಹೆಗಲಮೇಲೇರಿಸಿ ಭೂಗೋಳ, ಚರಿತ್ರೆ, ಭಾಷೆ, ಗಣಿತ, ವಿಜ್ಞಾನಗಳನ್ನು ಕಲಿಯುವುದೆಂದರೆ ಅದೊಂದು ದೈವೀ ಅನುಭವ. ಈಗಿನ ವಿದ್ಯಾರ್ಥಿಗಳು ಪುಣ್ಯವಂತರು. ಅವರು ಕಲಿಕೆಯ ಈ ಎಲ್ಲಾ ವಿಷಯಗಳನ್ನು ಹತ್ತಿಪ್ಪತ್ತು ಕೆ.ಜಿ. ತೂಗುವ ತಮ್ಮ ಸ್ಕೂಲ್‌ಬ್ಯಾಗ್ ಮೂಲಕವೆ ಹೇಗೆ ಕಲಿಯುತ್ತಾರೆ, ಇದರಿಂದ ದೇಶ ಸೇವೆ ಹೇಗೆ ಮಾಡುತ್ತಾರೆ ಎಂಬುದು ನಮ್ಮೆಲ್ಲರನ್ನು ಮೂಗು ಬೆರಳಾಗಿಸುತ್ತದೆ. ತೆಂಗಿನಕ್ಕಾಯಂತೆ ತಲೆಯ ಆಕಾರವನ್ನು ಬೆಳೆಸಿಕೊಂಡಿರುವ ನಾವು, ಈಗಿನ ಮಕ್ಕಳು ಸ್ಕೂಲ್‌ಬ್ಯಾಗ್ ಆಕಾರದ ತಲೆಯನ್ನು ನಿಧಾನವಾಗಿ ಬೆಳೆಸುತ್ತಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿ ತಿಳಿಯಬಹುದು.

ಕೆ.ಜಿ. ಕ್ಲಾಸಿನಿಂದ ತೊಡಗಿ ಏಳನೆಯ ತರಗತಿ ತಲುಪುವ ತನಕ ನಮ್ಮ ಮಕ್ಕಳಿಗೆ ಅತ್ಯಂತ ಸೂಕ್ತ, ವಸ್ತು ಆಧಾರಿತ, ಭಾರವಾದ ಶಿಕ್ಷಣ ಸಿಗುತ್ತದೆ -

ಬರಿಯ ಸ್ಕೂಲ್ ಬ್ಯಾಗನ್ನು ಬೆನ್ನಮೇಲೆ ಏರಿಸಿ ಹೊರುವುದರಿಂದ. ಈ ಒಂದೊಂದು ಬ್ಯಾಗಿನ ಭಾರವೂ ಹೆಚ್ಚು ಕಡಿಮೆ ಒಂದೊಂದು ಗ್ಯಾಸ್ ಅಂಡೆಯಷ್ಟು ಇರುವುದರಿಂದ ಬ್ಯಾಗಿನ ಬದಲು ಗ್ಯಾಸ್ ಅಂಡೆಯನ್ನೇ ಕೇಂದ್ರವಾಗಿಟ್ಟುಕೊಂಡು, ವಿದ್ಯಾಭ್ಯಾಸವನ್ನು ಹೊಸಬಗೆಯಾಗಿ ಹೇಗೆ ಪಡೆಯಬಹುದು - ಈ ರೀತಿಯಲ್ಲಿ ವಿದ್ಯಾಭ್ಯಾಸ ಪಡೆದ ಬಳಿಕ ಅಂಥಾ ವಿದ್ಯಾರ್ಥಿಗಳನ್ನು ಜಗತ್ತಿನ ಯಾವ ದೇಶವೂ ತನ್ನೊಳಗೆ ಸೇರಿಸಿಕೊಳ್ಳದೆ ಹೋಗುವುದರಿಂದ, ನಮ್ಮ ದೇಶದಲ್ಲಿ ಸಧ್ಯ ಸಂಭವಿಸುತ್ತಿರುವ ಪ್ರತಿಭಾ ಪಲಾಯನವೂ ಹೇಗೆ ನಿಂತು ಹೋದೀತು - ಇತ್ಯಾದಿಗಳೆಲ್ಲ ಮನನೀಯ ವಿಚಾರಗಳು.

ಈಗ ಗ್ಯಾಸ್ ಅಂಡೆ ಹೊರುವುದರಿಂದ (ಗ್ಯಾಸ್ ಅಂಡೆ, ಸ್ಕೂಲ್‌ಬ್ಯಾಗ್ ರೂಪದಲ್ಲಿ ವಿದ್ಯಾರ್ಥಿಗಳ ಬೆನ್ನ ಮೇಲಿರುತ್ತದೆ ಎಂಬುದು ಸತ್ಯ) ವಿದ್ಯಾರ್ಥಿಗಳು ಭೂಗೋಳ, ಚರಿತ್ರೆ ಭಾಷೆ ಗಣಿತ ವಿಜ್ಞಾನ ಪಾಠಗಳನ್ನು ಹೇಗೆ ಕಲಿಯಲು ಸಾಧ್ಯ ಎಂಬುದಕ್ಕೆ ಸೂಕ್ತ ಮಾರ್ಗದರ್ಶನ ಕೆಳಗಿನಂತಿದೆ.

ಭೂಗೋಳ: ಗ್ಯಾಸ್ ಅಂಡೆಗಳು ದೇಶದ ಯಾವ ಭಾಗದಲ್ಲಿ ಉತ್ಪತ್ತಿಯಾಗುತ್ತವೆ; ಅಂಡೆ ತಯಾರಿಸಲು ಬೇಕಾಗುವ ಕಬ್ಬಿಣ ದೇಶದ ಯಾವ ಗಣಿಯಲ್ಲಿ ಸಿಗುತ್ತದೆ, ಆ ಸ್ಥಳದ ಹವಾಮಾನ ಏನು ಕಬ್ಬಿಣದಿಂದ ಅಂಡೆ ತಯಾರಿಸುವ ಕಾರ್ಖಾನೆಗಳು ಎಲ್ಲೆಲ್ಲಿ ಇವೆ; ಅಲ್ಲಿ ಕೆಲಸ ಮಾಡುವ ಕೂಲಿಗಳು ಏನೇನು ತಿನ್ನುತ್ತಾರೆ, ದೊಡ್ಡ ಗ್ಯಾಸ್ ಟ್ಯಾಂಕರ್‌ಗಳು ಕೆಲವೊಮ್ಮೆ ಮಾರ್ಗಬಿಟ್ಟು ಗದ್ದೆಗೋ, ಹೊಳೆಗೋ. ಬೀಳುವುದಿದೆ. ಹಾಗೆ ಬಿದ್ದ ಸ್ಥಳದ ಭೌಗೋಳಿಕ ಸ್ಥಿತಿಗತಿಗಳೇನು, ಗದ್ದೆಗೆ ಉರುಳಿ ಬಿದ್ದಿದ್ದರೆ ಅದು ಯಾವ ರೀತಿಯ ಗದ್ದೆ - ವರ್ಷಕ್ಕೆ ಎಷ್ಟು ಬೆಳೆ ಬರುತ್ತದೆ, ಅಂಥ ಬೆಳೆ ಬರಬೇಕಾದರೆ ಆ ಸ್ಥಳದ ವಾರ್ಷಿಕ ಮಳೆ ಎಷ್ಟು - ಹೀಗೆ ಗ್ಯಾಸ್ ಅಂಡೆಯನ್ನು ಕೇಂದ್ರದಲ್ಲಿರಿಸಿಕೊಂಡೇ, ಇಡಿಯ ಪ್ರಪಂಚದ ಭೂಗೋಳವನ್ನು ಸಿಟಿಲೈಟ್ ದೃಷ್ಟಿ ಮೂಲಕ ಕಲಿಯಬಹುದು.

ಚರಿತ್ರೆ: ಮನುಷ್ಯ ಈ ಭೂಮಿಯ ಮೇಲೆ, ಸ್ವರ್ಗದಿಂದ ಕೆಳಗೆ ದೂಡಲ್ಪಟ್ಟ ದಿನದಿಂದ ಯಾವ ಬಗೆಯಲ್ಲಿ ಬೆಂಕಿ ಮಾಡುತ್ತಿದ್ದ, ಆಗ ಸ್ವರ್ಗದಲ್ಲಿ ಯಾವ ರಾಜ ಆಳುತ್ತಿದ್ದ, ಶಿಲಾಯುಗದಲ್ಲಿ ಹೊಗೆ, ತಾಮ್ರ ಯುಗದಲ್ಲಿ ಹೇಗೆ, ಬೆಳ್ಳಿಯುಗದಲ್ಲಿ ಹೇಗೆ, ಲಂಚ ಯುಗದಲ್ಲಿ ಹೇಗೆ ಬೆಂಕಿ ಮಾಡುತ್ತಿದ್ದ - ಎಂಬ ಪ್ರಶ್ನೆಗಳಿಗೆ ಉತ್ತರ ಕೊಡುವುದು; ಅಲ್ಲಿಂದ ಮುಂದೆ ಕಟ್ಟಿಗೆಯ ಉಪಯೋಗ ಕ್ರಿ.ಪೂ. ಯಾವ ಇಸವಿಯಿಂದ ಪ್ರಾರಂಭವಾಯಿತು, ಬಳಿಕ ಇದ್ದಲು ಚಿಮಿಣಿ ಎಣ್ಣೆ ಕೊನೆಗೆ ಗ್ಯಾಸ್. ಈ ಎಲ್ಲಾ ಹಂತಗಳನ್ನು ಅಗ್ನಿ ದಾಟುವಾಗ ಯಾವ ಯಾವ

ರಾಜರು ಎಲ್ಲೆಲ್ಲಿ ಆಳುತ್ತಿದ್ದರು, ಎಷ್ಟು ಯುದ್ಧಗಳಲ್ಲಿ ಹೋರಾಡಿದ್ದರು, ಅವರ ಅಂತಃಪುರದಲ್ಲಿದ್ದ ಇಡಿಯ ರಾಜ್ಯದ ಜನಸಂಖ್ಯೆಯ ಅರ್ಧದಷ್ಟು ರಾಜಕುಮಾರ ಕುಮಾರಿಯರನ್ನು ಉತ್ಪಾದಿಸಲು ಅವರಮನೆಯ ಮಂದಿಯರೆಲ್ಲ ಎಷ್ಟು ಸಹಾಯ ಮಾಡಿದ್ದರು; ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗ್ಯಾಸ್ ಅಂಡೆಯ ಪಾತ್ರ ಎಂದರೆ ಗಾಂಧೀಜಿಯವರಿಗೂ, ಗ್ಯಾಸ್ ಅಂಡೆ ರಾಜಕೀಯದಲ್ಲಿ ಪ್ರವೇಶ ದೊರಕಿಸಿಕೊಂಡ ಕಾಲಕ್ಕೂ ನಡುವೆ ಇದ್ದ ಸಮಯಾವಕಾಶ; ಈಗಿನ ಮಂತ್ರಿಗಳು ಗ್ಯಾಸ್ ಅಂಡೆಗಳನ್ನು ತಮ್ಮ ಸಂಬಂಧಿಕರಿಗೆ ಹೇಗೆ ಕೊಡಿಸುತ್ತಾರೆ - ಕೆಲವರು ಗ್ಯಾಸಿಗಾಗಿ ಮಂತ್ರಿಗಳ ಸಂಬಂಧ ಹೇಗೆ ಬೆಳೆಸುತ್ತಾರೆ, ಕೆಲವರು ಇದಕ್ಕಾಗಿ ಕಾಯುತ್ತಾ ಈ ಶತಮಾನದ ಅಂತ್ಯಕ್ಕಾಗುವಾಗ ಎಷ್ಟು ವರ್ಷದ ಮುದುಕರಾಗಬಹುದು, ಶಾಸನಗಳಲ್ಲಿ ಕಾಣಸಿಗುವ ಕೆಲವು ಚಿತ್ರಗಳು ಗ್ಯಾಸ್ ಅಂಡೆಗಳನ್ನೆ ಹೋಲುವುದರಿಂದ, ಆ ಕಾಲದಲ್ಲಿ ಗ್ಯಾಸ್ ಅಂಡೆಗಳು ಎಲ್ಲಿಂದ ಬಂದವು, ಗ್ಯಾಸ್ ಅಂಡೆಗಳ ಆಕಾರಕ್ಕೂ ಆಗ ಆಳಿದ ರಾಜ ಕುಟುಂಬಗಳು ಕಟ್ಟಿಸಿದ ದೇವಸ್ಥಾನಗಳಿಗೂ ಆಕಾರದಲ್ಲಿ ಯಾವ ಹೋಲಿಕೆಗಳಿವೆ - ಈ ರೀತಿಯಾಗಿ ಗ್ಯಾಸ್ ಅಂಡೆಯ ಮೂಲಕ ಚಾರಿತ್ರಿಕ ಸಂಶೋಧನೆ ಸಾಧ್ಯ.

ಇನ್ನು ವಿಜ್ಞಾನ: ಗ್ಯಾಸ್ ವಿಜ್ಞಾನದ ಅವಿಷ್ಕಾರ. ಹಾಗಾಗಿ ಗ್ಯಾಸ್ ಅಂಡೆಯನ್ನು ಕೇಂದ್ರದಲ್ಲಿಟ್ಟು, ಅಣು ವಿಜ್ಞಾನದ ತನಕ ಪಾಠ ಕಲಿಸಬಹುದು. ಮಹಾಭಾರತ ಯುದ್ಧದಲ್ಲಿ ಕೌರವರು ಪಾಂಡವರು ಗ್ಯಾಸ್ ಬಳಸುತ್ತಿದ್ದರೆ? ಹಾಗಿದ್ದರೆ ಆ ಗ್ಯಾಸಿನಲ್ಲಿದ್ದ ರಾಸಾಯನಿಕ ಅಂಶಗಳು ಯಾವುವು? ಐನ್‌ಸ್ಟೀನ್ ಸಾಕ್ಷೇಪ ಸಿದ್ಧಾಂತಕ್ಕೂ, ಗ್ಯಾಸ್ ಮುಗಿದಾಗ ಮನೆಯ ಒಡೆಯನಿಗೆ ಒದಗಿ ಬರುವ ರಕ್ತದ ಒತ್ತಡಕ್ಕೂ ಯಾವ ವೈಜ್ಞಾನಿಕ ಹೋಲಿಕೆಗಳಿವೆ; ಅಂಡೆಯೊಳಗಿರುವ ಗ್ಯಾಸ್ ಹೇಗೆ ತಯಾರಾಗುತ್ತದೆ ಇತ್ಯಾದಿ. ಬೃಹತ್ ಕೋಶದಲ್ಲಿ ತುಂಬಿರುವಷ್ಟು ವಿಜ್ಞಾನವನ್ನು ವಿದ್ಯಾರ್ಥಿಗಳಿಗೆ ಅಂಡೆ ಕೇಂದ್ರ ಶಕ್ತಿಯಿಂದ ಬಿಡುಗಡೆಗೊಳಿಸಬಹುದು.

ಹೀಗೆ ಗ್ಯಾಸ್ ಅಂಡೆಯನ್ನು ಮುಖ್ಯವಾಗಿಟ್ಟು, ವಿದ್ಯಾರ್ಥಿಗಳಿಗೆ ಯಾವ ವಿಷಯವನ್ನಾದರೂ ಕಲಿಸಬಹುದು - ಕಾರಣ ಗ್ಯಾಸ್ ಅಂಡೆಯಷ್ಟೇ ಭಾರದ ಬ್ಯಾಗನ್ನು ದಿನವೂ ಅವರು ಹೊರುತ್ತಿರುವುದು.

ಒಂದು ದಿನ ನಮ್ಮೂರಿನ ಗ್ಯಾಸ್ ಏಜಂಟರಿಗೆ ಗ್ಯಾಸ್ ದೇವಿ ಪ್ರತ್ಯಕ್ಷಳಾಗಿ ''ಎಲ ಎಲವೊ ನರ ಪ್ರಾಣಿಯೇ, ನಾನು ಗ್ಯಾಸ್‌ದೇವಿ. ನಿನ್ನ ಮೇಲೆ ಅನುಗ್ರಹಿತಳಾಗಿದ್ದೇನೆ. ನನ್ನ ಹೆಸರಿನಲ್ಲಿ ಒಂದು ದೇವಸ್ಥಾನಬೇಕು. ಅಲ್ಲಿ ನನ್ನ ಅಂಡೆಯನ್ನು .... ಇರಿಸಿ ದಿನವೂ ಅಭಿಷೇಕ ಪೂಜೆಗಳು ನಡೆಯುವಂತೆ

ಏರ್ಪಾಡು ಮಾಡು. ಭಾರತದ ಮುಂದಿನ ಜನಾಂಗವಾದ ಚಿಕ್ಕ ಮಕ್ಕಳಿಗೆ ಅಂಡೆ ಹೊರುವ ಅಭ್ಯಾಸ ಮಾಡಿಸು'' ಎಂದಳು.

ನಿದ್ದೆಯಿಂದ ಕಣ್ಣು ಬಿಡುವಷ್ಟರಲ್ಲಿ, ಮುಂದಿನ ಕಾರ್ಯಕ್ರಮದ ಪೂರ್ತಿ ನೀಲಿನಕಾಶೆ ಏಜಂಟರಲ್ಲಿ ಸಿದ್ಧವಾಗಿತ್ತು. ಅದರಲ್ಲಿ ಮುಖ್ಯವಾದದ್ದು ಮಕ್ಕಳಿಗೆ ಸ್ಪರ್ಧೆ. ಆ ಸ್ಪರ್ಧೆ ಹೀಗಿತ್ತು: ಎಲ್.ಕೆ.ಜಿ. ಯಿಂದ ಐದನೆಯ ತರಗತಿ ಕಲಿಯುವ ಮಕ್ಕಳಿಗೆ ಮಾತ್ರ ಈ ಸ್ಪರ್ಧೆ. ಯಾವ ವಿದ್ಯಾರ್ಥಿ ಎಷ್ಟು ವೇಗವಾಗಿ ಅಂಡೆಯೊಂದನ್ನು ಎತ್ತಿ ತನ್ನ ಬೆನ್ನಮೇಲೆ ಹೊತ್ತುಕೊಳ್ಳಬಲ್ಲ - ಎಂದು ನೋಡುವ ಸ್ಪರ್ಧೆ ಅದಾಗಿತ್ತು. ಅತಿ ಕಡಿಮೆ ಸಮಯದಲ್ಲಿ ಅಂಡೆಯನ್ನು ಬೆನ್ನ ಮೇಲೇರಿಸುವವನಿಗೆ ಆರು ಅಂಡೆಗಳನ್ನು ಧರ್ಮಾರ್ಥ ಪ್ರಥಮ ಬಹುಮಾನವಾಗಿ ಕೊಡಲಾಗುತ್ತಿತ್ತು; ದ್ವಿತೀಯ ಮೂರು, ತೃತೀಯ ಒಂದು.

ಒಂದೇ ವರ್ಷದೊಳಗೆ ಗ್ಯಾಸ್ ದೇವಿಯ ದೇವಸ್ಥಾನ ಸಿದ್ಧವಾಯಿತು. ಗ್ಯಾಸ್ ದೇವಿ ಎಂದರೆ, ಕಲಿಯುಗದಲ್ಲಿ ಸಾಕ್ಷಾತ್ ಲಕ್ಷ್ಮಿಯ ಅವತಾರ ಎಂದು ದೊಡ್ಡ ದೊಡ್ಡ ವಿದ್ವಾಂಸರು, ಗೆದ್ದಲು ತಿಂದ ತಾಳೆಗರಿ ಗ್ರಂಥಗಳನ್ನು ಓದಿ ತೀರ್ಮಾನಿಸಿದರು. ದೇಶದಲ್ಲಿ ಇದ್ದ, ಇಲ್ಲದ ಶೈಲಿಗಳನ್ನು ಅವಿಲ್‌ನಂತೆ ಬೆರಸಿ, ತಮಿಳು ಶಿಲ್ಪಿಗಳು ದೇವಾಲಯ ಕಟ್ಟಿದರು. ಅದರ ಪ್ರಾರಂಭೋತ್ಸವದ ದಿನವೇ ಮಕ್ಕಳ ಅಂಡೆ ಸ್ಪರ್ಧೆ.

ಗ್ಯಾಸ್ ಏಜಂಟರು ಈ ಬಗೆಯ ಸ್ಪರ್ಧೆಯನ್ನು ಘೋಷಿಸಿದ್ದೆ ತಡ ನಮ್ಮೂರಿನ ಡಾಕ್ಟರುಗಳು, ಇಂಜಿನಿಯರ್‌ಗಳು, ಕಂಟ್ರಾಕ್ಟರುಗಳು, ಮಾಸ್ತ್ರು, ಬಾರ್ ಮಾಲೀಕರು, ಹೋಟೆಲು ಮಾಲೀಕರು, ವಸ್ತ್ರದ ಅಂಗಡಿಯವರು, ಮಾರ್ಗದ ಬದಿಯಲ್ಲಿ ಚಡ್ಡಿ ಮಾರುವವರು, ಎಲ್ಲರೂ ತಮ್ಮ ತಮ್ಮ ಮಕ್ಕಳಿಗೆ ತುಂಬಿದ ಅಂಡೆಯನ್ನು ಬೆನ್ನಿನ ಮೇಲೆ ಕಡಿಮೆ ಸಮಯದಲ್ಲಿ ಹೇರಿಕೊಳ್ಳಲು ಅಭ್ಯಾಸ ಕೊಡಿಸಿದರು. ಮಕ್ಕಳ ಹಾಜರಾತಿ ತರಗತಿಯಲ್ಲಿ ತೆಳುವಾಯಿತು.

ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್.ಕೆ.ಜಿ. ಯಿಂದ ಹಿಡಿದು ಐದನೆಯ ತರಗತಿ ತನಕದ ಯಾವ ವಿದ್ಯಾರ್ಥಿಗೂ ಒಂದು ತುಂಬಿದ ಗ್ಯಾಸ್ ಅಂಡೆಯನ್ನು ಹೆಗಲ ಮೇಲೆ ಏರಿಸಲು ಕಷ್ಟವಾಗಲಿಲ್ಲ - ಸಮಯದ ವ್ಯತ್ಯಾಸದ ಹೊರತು ದೇವರು ಒಮ್ಮೊಮ್ಮೆ ಗುಡ್ಡೆಗಳನ್ನು ಎತ್ತಿ, ಭಕ್ತಾದಿಗಳಿಗೆ ಪುಕ್ಕಟೆ ಪ್ರದರ್ಶನ ಕೊಡುವಂತೆ, ಮಕ್ಕಳು ಪ್ರದರ್ಶನ ಕೊಟ್ಟರು. ಈ ಸ್ಪರ್ಧೆಯನ್ನು ಅತಿಯಾಗಿ ಮೆಚ್ಚಿ ಚಪ್ಪಾಳೆಯನ್ನು ಜೋರಾಗಿ ಬಾರಿಸಿದವರು ಟೀಚರುಗಳೇ.

ಅಂತ್ಯದಲ್ಲಿ ಮೂರನೆಯ ತರಗತಿಯ ಒಬ್ಬ ಹುಡುಗ, ಒಂದು ತುಂಬಿದ ಅಂಡೆಯನ್ನು ಒಂದುವರೆ ನಿಮಿಷದಲ್ಲಿ ಬೆನ್ನಿಗೇರಿಸಿ ವಿಜಯಿಯಾದ. ಕೂಡಲೇ

ಪತ್ರಿಕೆಯವರು, ಟಿ.ವಿ.ಯವರು, ಅವನ ಸುತ್ತ ನೆರೆದು, ಅವನಲ್ಲಿ ಅಂಡೆ ಹೊರುವ ಶಕ್ತಿ ಹೇಗೆ ಬಂತು ಎಂದು ಪ್ರಶ್ನಿಸಿದರು. ಆಗ ನಗುನಗುತ್ತಾ ''ನಮ್ಮ ಟೀಚರ್ ಹೇಳಿದ ಹಾಗೆ ದಿನವೂ ಒಂದೊಂದು ಅಂಡೆಯಷ್ಟು ಭಾರದ ಸ್ಕೂಲ್ ಬ್ಯಾಗನ್ನು ಹೊತ್ತೂ ಹೊತ್ತೂ ನನಗೆ ಈ ತ್ರಾಣ ಬಂತು. ನನ್ನ ಈ ಶಕ್ತಿಗೆ ದೇವಿ ರೂಪದ ಟೀಚರೇ ಕಾರಣ'' ಎಂದು ಆರು ತುಂಬಿದ ಅಂಡೆಗಳನ್ನು ಪಡೆದ. ಆಗ ಅಲ್ಲಿ ನೆರೆದಿದ್ದ ಟೀಚರ್‌ಗಳು, ಹೆತ್ತವರು, ಶಾಲಾ ಆಡಳಿತ ಮಂಡಲಿಯವರು - ಎಲ್ಲರೂ ಸಂತೋಷದ ಕಣ್ಣೀರು ಸುರಿಸಿದರು. ಹುಡುಗನನ್ನು ಮೆರವಣಿಗೆಯಲ್ಲಿ ಹೊಸ ದೇವಸ್ಥಾನಕ್ಕೆ ಕರೆದೊಯ್ದು, ಅವನಿಂದಲೇ ಪ್ರಾರಂಭೋತ್ಸವ ನಡೆಸಿದ ಬಳಿಕ, ದೇವಸ್ಥಾನದ ಭಟ್ಟರು ''ಮಹಾದೇವಿ, ನಿನ್ನ ಶಕ್ತಿಗೆ ಪಾರವೇ ಇಲ್ಲ. ಮೂರನೆಯ ಕ್ಲಾಸಿನ ಹುಡುಗ ಒಂದುವರೆ ನಿಮಿಷದಲ್ಲಿ ಒಂದು ತುಂಬಿದ ಗ್ಯಾಸ್ ಅಂಡೆಯನ್ನು ತನ್ನ ಬೆನ್ನ ಮೇಲೆ ಏರಿಸಿಕೊಳ್ಳಲು ನಿನ್ನ ಆಶೀರ್ವಾದವೇ ಕಾರಣ. ಇನ್ನು ಮುಂದೆ ಎಲ್.ಕೆ.ಜಿ. ಹುಡುಗರೂ ಕ್ಷಣ ಮಾತ್ರದಲ್ಲಿ ಗ್ಯಾಸ್ ಅಂಡೆ ಬೆನ್ನಿಗೆ ಏರಿಸುವಂತೆ ತ್ರಾಣ ದಯಪಾಲಿಸಮ್ಮ'' ಎಂದರು.

ಸ್ಪರ್ಧೆ ಮುಗಿದ ಮೂರನೆಯ ದಿನ ಎಲ್.ಕೆ.ಜಿ. ಟೀಚರರ ಮನೆಯ ಎದುರು, ಸೈಕಲ್ ಮೇಲೆ ತುಂಬಿದ ಗ್ಯಾಸ್ ಅಂಡೆ ಬಂತು. ಕೂಲಿಯಾಳು ಅಂಡೆಯನ್ನು ಸೈಕಲಿನಿಂದ ಕೆಳಗಿಳಿಸುವಾಗ ಅವನ ಬೆನ್ನ ಮೂಳೆ ಲಟಕ್ ಎಂದಿತು. ಅವ ಅಲ್ಲಿಯೆ ಕುಸಿದು ಬಿದ್ದ. ಇದನ್ನು ನೋಡುತ್ತಿದ್ದ ಟೀಚರ್, ನೆರಮನೆಯಲ್ಲಿದ್ದ ಎಲ್.ಕೆ.ಜಿ. ಹುಡುಗನನ್ನು ಕರೆದು ''ಬಭ್ರುವಾಹನಾ, ಆ ಅಂಡೆಯನ್ನು ಒಳಗೆ ತಂದು ಇಡಪ್ಪಾ'' ಎಂದರು. ಬಭ್ರುವಾಹನ, ಶಾಲೆಯ ಸಮವಸ್ತ್ರದಲ್ಲಿದ್ದವ ಲೀಲಾಜಾಲವಾಗಿ ತುಂಬಿದ ಗ್ಯಾಸ್ ಅಂಡೆಯನ್ನು ಬೆನ್ನಮೇಲೆ ಏರಿಸಿಕೊಂಡು, ಟೀಚರರ ಅಡುಗೆ ಕೋಣೆಗೆ ಸಾಗಿಸಿ, ತನ್ನ ಗುರು ಋಣವನ್ನು ಅಷ್ಟು ಚಿಕ್ಕವನಿರುವಾಗಲೇ ತೀರಿಸಿಬಿಟ್ಟ.

ತಾಟಕಿ

ಗಂಡಸರ ಮನಸೆಳೆದ ಮೈ ಚೆಲುವು, ಹರೆಯವಿದೆ
ಬಿದ್ದಿಹವು, ಹಲ್ಲುಗಳು ಮಾತ್ರ ಎಲ್ಲಾ
''ಅವಳ ನಾಲಿಗೆಯೇನೇ ಒದ್ದು ಕೆಡವಿರಬೇಕು
ಹಲ್ಲುಗಳ'' ಎನ್ನುವನು ಅವಳ ನಲ್ಲ!

- ವಿ.ಜಿ.ಭಟ್ಟ

ರಾಜಕೀಯ ಶಾಸ್ತ್ರ - "ಮಾದರಿ ಪ್ರಶ್ನೆಪತ್ರಿಕೆ"

- ವೈ ನಾರಾಯಣ ಶರ್ಮ

ಕುರಿ ಮಾದರಿ ಮಂದಿ ಎಚ್ಚೆತ್ತಾಗ ಎಂತಹ ಭಂಡ ರಾಜಕಾರಣಿಯೂ ಬಗ್ಗಿ-ತಗ್ಗಿ ನಡೆಯಬೇಕು. ಪ್ರಜಾಪ್ರಭುತ್ವದ ನಾಲ್ಕು ಅಂಗಗಳ ಜೊತೆ 'ಎಚ್ಚೆತ್ತ ನಾಗರಿಕ' ಐದನೆಯ ಅಂಗ. ಪ್ರಜಾಪ್ರಭುತ್ವದ ಉಳಿವಿಗೆ ಐದನೆಯ ಅಂಗ ಅತಿ ಮುಖ್ಯ. ಇಂತಹ ಫೆಂಟಾಸ್ಟಿಕ್ ಐಡಿಯಾ ಭಾರತೀಯ ಮತದಾರನಿಗೆ ಹೊಳೆದಿರುವುದು ರಾಜಕೀಯ ಪಕ್ಷಗಳಿಗೆ ತಲೆ ನೋವಾಗಿದೆಯೆಂದು ಅಂಬೋಣ. ರಾಜಕೀಯವೂ ಇತ್ತೀಚೆಗೆ ಒಂದು ಫಲವತ್ತಾದ ವೃತ್ತಿಯಾಗುತ್ತಿರುವುದರಿಂದ ಮುಂಬರುವ ದಿನಗಳಲ್ಲಿ 'ಪೊಲಟಿಕಲ್ ಸೈನ್ಸ್' ಗೆ ನುಗ್ಗುವ ವಿದ್ಯಾರ್ಥಿಗಳ ಸಂಖ್ಯೆ ಬಿ.ಪಿ. ಯಂತೆ ಹೆಚ್ಚಲಿದೆ ಎಂದು ಸಮೀಕ್ಷೆಯೊಂದು ತಿಳಿಸಿದೆ. ಪರಿಸ್ಥಿತಿ ಮತ್ತು ಸಮಾಜದ ಬೇಡಿಕೆಗೆ ತಕ್ಕಂತೆ ಸಿಲಿಬಸ್ ಮತ್ತು ಪಠ್ಯಪುಸ್ತಕಗಳು ಬದಲಾಗುವುದು ಸಹಜ. "ಭಾರತದ ಪ್ರಚಲಿತ ರಾಜಕೀಯ ವಿದ್ಯಮಾನಗಳು" ಎಂಬ ಹೊಸ ವಿಷಯವನ್ನು ರಾಜಕೀಯ ಶಾಸ್ತ್ರದ ವಿದ್ಯಾರ್ಥಿಗಳು ಇನ್ನು ಮುಂದೆ ಅಧ್ಯಯನ ಮಾಡಬೇಕಾಗುತ್ತದೆ. ಹೊಸ ಸಬ್ಜೆಕ್ಟ್ ಆದ್ದರಿಂದ ಹೊಸ ಮಾದರಿ ಪ್ರಶ್ನೆ ಪತ್ರಿಕೆಯ ಸ್ವರೂಪವನ್ನು ಪರಿಚಯಿಸಬೇಕಲ್ಲವೆ? ಇದಕ್ಕಾಗಿ ಒಂದು sample question paper ತಯಾರಿಸಲಾಗಿದೆ. ಮುಂದಿನ ಚುನಾವಣೆಯಲ್ಲಿ ಹುರಿಯಾಳುಗಳನ್ನಾರಿಸುವಾಗ 'ಭಾರತದ ಪ್ರಚಲಿತ ರಾಜಕೀಯ ವಿದ್ಯಮಾನಗಳು' ಎಂಬ Subject ನಲ್ಲಿ ಅತಿ ಹೆಚ್ಚು ಅಂಕ ಗಳಿಸುವವರಿಗೆ ಆಯ್ಕೆಯಲ್ಲಿ preference ಕೊಡಲಾಗುವುದು ಎಂದು ಈಗಾಗಲೇ ವಿವಿಧ ರಾಜಕೀಯ ಪಕ್ಷಗಳು ಘೋಷಿಸಿವೆ.

ಇಗೋ! ಇಲ್ಲಿದೆ ನೋಡಿ Sample question paper:

1. ಚರ್ಚಿಸಿ (ಯಾವುದಾದರೂ 3 ಮಾತ್ರ)

   ಅ) ಭಾರತದಲ್ಲಿ ಉಗ್ರಗಾಮಿಗಳನ್ನು ಹಣ್ಣುಗಾಯಿ - ನೀರುಗಾಯಿ ಮಾಡಲು ದೇಶೀಯ ಸಮಾಜ ದ್ರೋಹಿಗಳ ವಿಶೇಷ ಪಡೆಯನ್ನೂ ನಿರ್ಮಿಸಬಹುದೆ?

ಆ) ತಾಷ್ಕೆಂಟ್ ಒಪ್ಪಂದ, ಲಾಹೋರ್ ಒಪ್ಪಂದ, ಕ್ಲಿಂಟನ್ ವಾಜಪೇಯಿ ಮಾತುಕತೆ ಇವುಗಳ ಪೈಕಿ ಕಾಶ್ಮೀರವನ್ನು ಭಾರತದಲ್ಲಿ ಉಳಿಸಿಕೊಳ್ಳಬಹುದಾದರೆ ಯಾವುದು ಹೆಚ್ಚು ಸೂಕ್ತ?

ಇ) ಭ್ರಷ್ಟಾಚಾರ ಮತ್ತು ಜಾತೀಯತೆ ಇವೆರಡೂ ರಾಜಕೀಯದ ಎರಡು ಹೊಲಸು ಮುಖಗಳು.

ಈ) ವೀರಪ್ಪನನ್ನು ಸೆರೆಹಿಡಿಯಲು ಬಡಪಾಯಿ ಸಿವಿಲ್ ಪೋಲಿಸರಿಗೆ ಅಸಾಧ್ಯವಾಗಿರುವುದರಿಂದ 'ಸೇನಾ ಕಾರ್ಯಾಚರಣೆ ಒಂದೇ ಇನ್ನುಳಿದಿರುವ ದಾರಿ' ಈ ವಾದವನ್ನು ಒಪ್ಪಬಹುದೆ?

ಉ) ಭಾರತೀಯ ಸಂವಿಧಾನಕ್ಕೆ ಈಗಾಗಲೇ 80 ಬಾರಿ ಆಪರೇಷನ್ ಮಾಡಿರುವುದರಿಂದ, ಅದರ ಸ್ವರೂಪವನ್ನೂ ಸಾಕಷ್ಟು ಗಬ್ಬೆಬ್ಬಿಸಿರುವುದರಿಂದ ಸಂವಿಧಾನ ಪುನರ್ವಿಮರ್ಶೆಯ ಕಾರ್ಯಕ್ಕೆ ಮಂಗಳ ಹಾಡುವುದು ಒಳಿತೆ?

ಊ) ಇನ್ನು ಮುಂದೆ ಶಾಸನ ಸಭೆ ಹಾಗೂ ಸಂಸತ್ ಸದಸ್ಯರಿಗೆ ಕನಿಷ್ಠ ವಿದ್ಯಾರ್ಹತೆ ಮತ್ತು ಗರಿಷ್ಟ ವಯೋಮಿತಿಯನ್ನು ಕಡ್ಡಾಯಗೊಳಿಸುವುದು ಪಕ್ಷಪಾತ ಕ್ರಮವಾಗದೆ?

2. ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ:

1. ರಾಜಕೀಯ ವ್ಯಕ್ತಿಗಳು ಪದೇ ಪದೇ ವಿದೇಶ ಪ್ರವಾಸಕ್ಕೆ ಏಕೆ ಹೋಗುತ್ತಾರೆ?
2. ಕಾಂಗ್ರೆಸ್ ಮತ್ತು ಜನತಾದಳ ಎಷ್ಟು ಸಲ ಹೋಳು ಹೋಳಾಗಿವೆ? ಏಕೆ?
3. ಕಪ್ಪೆ ಮತ್ತು ಕುರ್ಚಿಯ ಚುನಾವಣಾ ಚಿನ್ಹೆಗಳನ್ನು ಯಾವ ಯಾವ ರಾಜಕೀಯ ಪಕ್ಷಗಳಿಗೆ ಕೊಡಬಹುದು?
4. ''ಒಂದೇ ವಂಶದ ವ್ಯಕ್ತಿಗಳು ಅಧಿಕಾರದಲ್ಲಿದ್ದರೆ ಅನುಭವ ಮತ್ತು ಅನುವಂಶಿಕತೆಯ ಪ್ರಭಾವ ಆಡಳಿತಕ್ಕೆ ಒದಗಿಬರುವುದು'' ಈ ಸಿದ್ಧಾಂತವನ್ನು ಒಪ್ಪಬಹುದಲ್ಲವೆ?
5. 'ಸೋತ ಅಭ್ಯರ್ಥಿಗಳನ್ನು ರಾಜ್ಯಪಾಲರನ್ನಾಗಿ ಮಾಡುವುದು ಒಂದು ಸತ್ಸಂಪ್ರದಾಯ' ಈ ಹೇಳಿಕೆ ಕುರಿತು ನಿಮ್ಮ ಅಭಿಪ್ರಾಯವೇನು?

3. ಈ ಹೇಳಿಕೆ ಸರಿಯೆ? ತಪ್ಪೆ? ತಿಳಿಸಿ

1. ಬಿ.ಜೆ.ಪಿ. ಒಂದು ಮತೀಯ ಪಕ್ಷ
2. ಕಾಂಗ್ರೆಸ್ ಬಂಡವಾಳಶಾಹಿ ಮತ್ತು ಮೇಲ್ವರ್ಗದ ರಾಜಕಾರಣಿಗಳ ಸಂತೆ

3. ಭಾರತದ ಎಡರಂಗ ಪಕ್ಷಗಳಿಗೆ (leftists) ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ದೊರಕುವುದು ಹಗಲು ಗನಸು.

4. ವಿಟಮಿನ್ "M' ಇದ್ದರೆ ರೌಡಿಯೂ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯ.

5. ಭಾರತದಲ್ಲಿ ಆಗಾಗ್ಗೆ ಎಮರ್ಜೆನ್ಸಿ ಘೋಷಿಸುವುದು ಒಳ್ಳೆಯದು.

4. ಈ ಪದ ಪುಂಜಗಳಿಗೆ ಜನ ಸಾಮಾನ್ಯರಲ್ಲಿ ಬೇರೂರಿರುವ ಒಳ ಅರ್ಥವೇನು?

1. ಕುದುರೆ ವ್ಯಾಪಾರ

2. ಸೂಟ್‌ಕೇಸ್ ವ್ಯವಹಾರ

3. ಆಯೋಗ ರಚನೆ

4. ಜ್ಯಾತ್ಯಾತೀತತೆ - ಧರ್ಮ ನಿರಪೇಕ್ಷತೆ

5. ಕೇಂದ್ರದ ಎನ್.ಡಿ.ಎ. ಸರಕಾರ

5. ಕೆಳಗೆ ಕಾಣಿಸಿರುವ ರಾಜಕೀಯ ಪಕ್ಷಗಳಿಗೆ ಅವುಗಳ ಕಾರ್ಯ ವೈಖರಿಯನ್ನು ತೂಗಿನೋಡಿ ಹೊಸ ಅರ್ಥವನ್ನು ಸೂಚಿಸಿ.

ಮಾದರಿ: ಪ್ರಜಾಪ್ರಭುತ್ವ ಪಕ್ಷ - ಪ್ರಜೆ ಪ್ರಜೆಯಾಗಿಯೇ, ಪ್ರಭು ಪ್ರಭುವಾಗಿಯೇ ಮುಂದುವರಿಯುವ ಪಕ್ಷ

(1) ಬಿ.ಜೆ.ಪಿ., (2) ಕಾಂಗ್ರೆಸ್ (ಐ), (3) ಕಮ್ಯೂನಿಸ್ಟ್ ಪಕ್ಷಗಳು (4) ಮುಸ್ಲಿಂಲೀಗ್ (5) ಜನತಾದಳ (ಯು+ಎಸ್) (6) ವಾಟಾಳ್ ಪಕ್ಷ, (7) ಸಮತಾ ಪಾರ್ಟಿ, (8) ಎ.ಐ.ಎ.ಡಿ.ಎಂ.ಕೆ. (9) ನ್ಯಾಷನಲ್ ಕಾನ್ಫರೆನ್ಸ್, (10) ತೃಣಮೂಲ ಕಾಂಗ್ರೆಸ್

6. ಈ ಹೇಳಿಕೆಗಳನ್ನು ಕೊಟ್ಟವರು ಯಾರು?

1. ಈಶಾನ್ಯ ಪ್ರದೇಶಗಳ ಅಭಿವೃದ್ಧಿಗಾಗಿ 7,000 ಕೋಟಿ ರೂ. ತೆಗೆದಿರಿಸಿದ್ದೇನೆ.

2. ಪತ್ರಿಕೆಗಳು ಪಕೋಡ ಕಟ್ಟಿಕೊಡಲು ಮಾತ್ರ ಲಾಯಕ್ಕು.

3. ನನ್ನ ಆರೋಗ್ಯ ಸರಿಯಿಲ್ಲ, ವಯಸ್ಸಾಗಿದೆ, ಆದರೂ ಪಕ್ಷ ಆರಿಸಿದರೆ ಪ್ರಧಾನಿಯಾಗಲು ಸಿದ್ಧ.

4. ನನ್ನ ಬಳಿ ಇರುವ ಒಡವೆ - ವಸ್ತ್ರ, ಹಣ ಪಾದರಕ್ಷೆಗಳು ಇತ್ಯಾದಿ ಎಲ್ಲವೂ ಹುಟ್ಟುಹಬ್ಬದ ಉಡುಗೊರೆಯಾಗಿ ಬಂದದ್ದು.

5. ವಿದೇಶಿಯಾದರೂ ನಾನು ಭಾರತೀಯರ ನಾಗರಿಕಳು.

ಭೂತ ಬಿಡಿಸಿದರು

– ನಾಗಶ್ರೀ ಸೂರಿ

ಎರಡು ವರ್ಷಾನೇ ಆಗಿತ್ತು, ನಾನು ಬೆಂಗಳೂರಿಗೆ ಬಂದು. ಹಾಗಾಗಿ ಈ ಸಲ ಊರಿಗೆ ಬಂದ ಮಾರನೇ ದಿನಾನೇ ಗಾಂಧೀ ಬಜ಼ಾರಿನ ಕಡೆ ಹೊರಟೆ, ಏನೇನೆಲ್ಲ changes ಆಗಿದೆ ಅನ್ನೋದನ್ನ ನೋಡಿಕೊಂಡು ಬರೋಣ ಅಂತ.

ವಿದ್ಯಾರ್ಥಿ ಭವನದಲ್ಲಿ ದೋಸೆ ತಿಂದುಕೊಂಡು ಆಚೆ ಬಂದರೆ ಅಲ್ಲೇ ಎದುರಿಗೆ ಸಿಕ್ಕಿದರು ನಮ್ಮ ಸೋದರತ್ತೆ ಮಾಣಿಕ್ಯ - ಸೊಪ್ಪು ಮಾರೋವಳ ಹತ್ರ ಚೌಕಾಸಿ ಮಾಡತಾ ಇದ್ದರು.

''ಅಲೆ, ಇವನ! ಯಾವಾಗ ಬಂದ್ಯೋ, ಊರಿಂದ?.. ನಿನ್ನ ಹೆಂಡತೀನೂ ಬಂದಿದ್ದಾಳೇನೋ ಜತೇನಲ್ಲಿ?..''

''ಇಲ್ಲ, ಅತ್ತೆ...ಕೊಯಮತ್ತೂರಲ್ಲಿ ಒಂದು ಟೆಂಡರ್ ಓಪನಿಂಗ್ ಇತ್ತು. ಅದಕ್ಕೆ ಬಂದಿದ್ದೀನಿ..ಅದಿರಲಿ, ನೀವು ಹ್ಯಾಗಿದ್ದೀರಿ? ಮತ್ತೆ, ಹನುಮಂತು ಮಾವ, ಅವರು ಹ್ಯಾಗಿದ್ದಾರೆ? ರಿಟೈರಾದಾಗಿಂದಲೂ ಅದೇನೇನೋ ಥರಲೆ ಕೆಲಸ ಅನ್ನೋವನ್ನ ತಲೆಗೆ ಹಚ್ಕೊಂಡು ಹಾರಾಡತಾ ಇದ್ರಲ್ಲ, ಆ ಹುಚ್ಚು ಈಗಲಾದರೂ ಬಿಟ್ಟಿರ್ಬೋದೂ ಅಂತೀನಿ......ಹತ್ಹತ್ರ ಎಪ್ಪತ್ತಕ್ಕೆ ಬಂತಲ್ಲ ಅವರಿಗೂನೆ..''

''ಹಯ್ಯೋ, ಎಲ್ಲಿ ಬಂತು.... ಆವಾಗಿದ್ದ ಹುಚ್ಚು ಹೋಯಿತೂ ಅಂದ್ರೆ ಈಗ ಬೇರೇ ಥರದ್ದೇ ಇನ್ನೊಂದು ಹುಚ್ಚು ತಗಲಿಕೊಂಡಿದೆ....ಹಾಗಾಗಿ ರಸ್ತೇನಲ್ಲಿ ತಲೆ ಎತ್ಕೊಂಡು ಓಡಾಡೋ ಹಾಗಿಲ್ಲ, ನನಗೆ...''

''ಅಂಥಾದ್ದೇನಾಗಿದೆ, ಅತ್ತೆ?...''

''ಏನು ಹೇಳಲಿ, ಸೂರಿ? ಈಗ ಕೊಂಚ ದಿನದ ಕೆಳಗೆ ಅದೆಲ್ಲೋ ನೋಡಿದರಂತೆ ಅದೇನೋ "Keep Bangalore clean and green" ಅಂಥನ್ನೋ ಪೋಸ್ಟರನ್ನ, ತಗೋ ಮಾರನೇ ದಿನದಿಂದಲೇ ಇವರು ಅದೇನೋ ಇರುವೆ ಬಿಟ್ಕೊಂಡ್ರೂ ಅಂತಾರಲ್ಲ, ಹಾಗೆ ಶುರೂ ಮಾಡಿದ್ರು- ಇಡೀ ಬೆಂಗಳೂರನ್ನ ಕ್ಲೀನಾಗಿ ಮಾಡಿಸೋಕೆ ಒಬ್ಬ ಒಂಟಿ ಮನುಷ್ಯನಿಂದ ಆಗದೇ ಇರಬಹುದು, ಆದ್ರೆ ಮನಸ್ಸು ಮಾಡಿದ್ರೆ ಕಡೇ ಪಕ್ಷ ನಮ್ಮ areaನಾದ್ರೂ

ಚೊಕ್ಕಟವಾಗಿ ಇರೋ ಥರಾ ಮಾಡಿಸತೀನಿ ಅಂತ ಹೊರಟರು. ಒಂದು ನಾಕು ವಾರ ಮಾಡೋ ಹೊತ್ಗೆ ಅವರಿಗೆ ಜ್ಞಾನೋದಯ ಆಯಿತು - ಅದಕ್ಕಿನ್ನ ಜ್ಞಾನೋದಯ ಮಾಡಿಸ್ಕೊಂಡ್ರೂ, ಅಂದ್ರೆ ಸರಿಯಾಗಿರತ್ತೆ.... ಆ clean Bangalore ಅನ್ನೋದು ಬಿಟ್ಟು ಹೋಯಿತು...

ಮತ್ತೆ ಈಗgreen Bangalore ಅಂಥನ್ನೋದು ಹಿಡಕೊಂಡಿದೆ.....''

''ಅದೇನೋ ಜ್ಞಾನೋದಯ ಮಾಡಿಸಿದರೂ ಅಂದ್ರಲ್ಲ, ಅದೇನು ಆಗಿದ್ದು?''

''ಅದೆಂಥಾ ಅವಮಾನ ಆಯ್ತೂ ಅಂತೀಯ?...ಪಕ್ಕದ ಮನೇಲಿ ಕಸ, ಮುಸುರೆಗೆ ಬರೋ ಮೇರಿಯಮ್ಮ ಕಸಾನ ಯಾವತ್ತೂ ನೆಟ್ಟಗೆ ತೊಟ್ಟೀನಲ್ಲಿ ಹಾಕಿದೋಳೇ ಅಲ್ಲ. ಎಲ್ಲಾ ಬಿಟ್ಟು ಅವಳಿಗೆ ಇವರು ಬುದ್ಧೀ ಹೇಳೋಕ್ಕೆ ಹೋಗಿ ಮುಖ ಕೆಂಪಗೆ ಮಾಡಿಸ್ಕೊಂಡು ಬಂದ್ರು - ಅವಳಿಗೆ ಬಾಯಿನಲ್ಲಿ ಎಲೆಅಡಿಕೆ ಇಲ್ಲದ ದಿನವೇ ಇರೊಲ್ಲ, ನೀನೇ ನೋಡಿರತೀಯಲ್ಲ... ಅಷ್ಟಾದ ಮೇಲಾದ್ರೂ ಬುದ್ಧೀ ಬಂತಾ ನಿಮ್ಮ ಮಾವಂಗೆ? ಉಹುಂ... ಅದಕ್ಕಿಂತಾ ಹೇಳಬಾರದಂಥ ಅವಮಾನ ಆಗಿ ನಾನು ಅತ್ತೂ ಕರೆದೂ ಮಾಡಿದಮೇಲೇನೇ ಅವರು ಅದನ್ನು ಬಿಟ್ಟದ್ದು...''

''ಅಂಥಾದ್ದೇನಾಯ್ತು, ಅತ್ತೆ?''

''ಅದೇನಾಯ್ತೂ ಅಂತ ಅದ್ಯಾವ ಬಾಯಲ್ಲಿ ಹೇಳಲಿ, ಸೂರಿ? ಅವತ್ತೊಂದು ದಿವಸ ಬೆಳಗ್ಗೆ ನಮ್ಮ ಮನೆ ಪಕ್ಕದಲ್ಲಿ ಖಾಲೀ ಸೈಟಿದ್ಯಲ್ಲ ಅಲ್ಲಿ ಒಬ್ಬ ಧಾಂಡಿಗ ನಿಂತ್ಕೊಂಡು ಅದೇನೋ ನೀವು ಹೇಳತೀರಲ್ಲ ಕಂದಾಯ ಕಟ್ಟೋದು ಅಂತ, ಅದನ್ನ ಮಾಡತಾ ಇದ್ದ. ಇವರು ಸುಮ್ನೆ ಇರಲಾರದೇ ಅವನ ಹತ್ರ ಜಗಳಕ್ಕೆ ಹೋಗಿದ್ದಾರೆ, ನಿಂಗೆ ಬೇರೆ ಯಾವುದೂ ಜಾಗಾನೇ ಸಿಕ್ಕಲಿಲ್ಲವೇ ಈ ಕೆಲಸಕ್ಕೆ ಅಂತ ಕೂಗಾಡ್ಕೊಂಡು, ಅದಕ್ಕೆ ಅವನು ಹ್ಯಾಗೆ react ಮಾಡಿದಾ ಗೊತ್ತಾ?..''

''ಬಹುಶಃ ಎರಡೇಟು ಕೊಟ್ಟಿರಬಹುದೂ ಅಂತೀನಿ..''

''ಇಲ್ಲಪ್ಪ, ಹಾಗಾದ್ರೂ ಆಗಿದ್ದಿದ್ರೆ ಎಷ್ಟೋ ಚೆನ್ನಾಗಿರತಿತ್ತು.... ಆ ಧಾಂಡಿಗ ಏನು ಮಾಡಿದಾ ಅಂತೀಯ? ಬೇರೇ ಜಾಗಾನಾ ಸಾರ್, ಇಲ್ಲೀ ತನಕಿ ಸಿಕ್ಕಿರಲಿಲ್ಲ, ಈಗ ಸಿಕ್ಕಿದೆ ಅಂತ ಹೇಳಿದೋನೆ ಇವರ ಕಡೆ ತಿರಗ್ಕೊಂಡು ಇವರ ಬಟ್ಟೇ ಮೇಲೇನೇ ಆ ಕೆಲಸಾನಾ ಮುಗಿಸ್ಕೊಂಡು ಹೋದ...''

''ಹೋಗಲಿ ಬಿಡಿ, ಅತ್ತೆ, ಈ green Bangalore ಅಂಥನ್ನೋದ್ರಲ್ಲಿ ಹಾಗೆಲ್ಲ ಅವಮಾನ ಆಗೊಲ್ಲ''

''ಅಯ್ಯೋ, ನಿನ್ನ ತಲೆ.....ನಿಮ್ಮ ಮಾವನ ಈ ಹೊಸಾ ಹುಚ್ಚುಚ್ಚಾಟದಿಂದಾಗಿ ರಸ್ತೇ ಹೆಂಗಸರೆಲ್ಲ ನನ್ನ ಹತ್ರ ಮಾತಾಡೋದು ನಿಲ್ಲಿಸಿ ಬಿಟ್ಟಿದ್ದಾರೆ...''

''ಅರ್ಥವಾಗಲಿಲ್ಲ, ಅಲ್ಲಾ, ಮರ ಬೆಳಸಿ, ಮರ ಉಳಿಸಿ ಅಂತನ್ನೋದು ಅವರುಗಳ ಒಳ್ಳೇದಕ್ಕೇ ಅಲ್ಲವೇ?''

''ಚೆನ್ನಾಗಿ ಬೆಳೆದಿರೋದು, ಹಸಿರಾಗಿರೋದು ಅನ್ನೋ ಮರಗಳ ಬಗ್ಗೆ ಇವರು ಗಲಾಟೆ ಮಾಡಿದ್ರೆ ಏನೋ ಪರವಾಗಿಲ್ಲ ಅನ್ನಬಹುದು, ಆದರೆ ಇವರು ಹಿಡಕೊಂಡಿರೋದು ನಮ್ಮ ರಸ್ತೇಲಿ ಇವೆಯಲ್ಲ, ಆ ಹತ್ತು ಕತ್ತೀ ಕಾಯಿ ಮರಗಳು, ಅದರ ಸಂರಕ್ಷಣೇನ....''

''ಏನು, ಆ ಕತ್ತೀ ಕಾಯಿ ಮರಗಳು ಇನ್ನೂ ಬಿದ್ದು ಹೋಗಿಲ್ಲವಾ? ಅರವತ್ತು ವರ್ಷದ್ಮೇಲೇನೇ ಆಗಿರಬೇಕು ಅಂತೀನಿ, ಅವನ್ನ ನೆಟ್ಟು. ಹುಡುಕಿದ್ರೆ ಒಂದು ಹಸಿರೆಲೆ ಸಿಕ್ಕೊಲ್ಲ ಆ ಮರಗಳಲ್ಲಿ... ಎಲ್ಲಾ ಒಣಕಲು ಕೊಂಬೆಗಳೇ, ಬುಡದಲ್ಲಿ ಗೆದ್ದಲು ಬೇರೆ. ಯಾವಾಗ ಬೇಕಾದ್ರೂ ಬಿದ್ದು ಹೋಗಬಹುದು......''

''ಹೌದು ಸೂರೀ, ರಸ್ತೇ ಜನಾನೂ ಅದನ್ನೇ ಹೇಳತಾ ಇರೋದು-ಹತ್ತತ್ರ ಎಪ್ಪತ್ತು ವರ್ಷದೋವು, ಈ ಎಲ್ಲಾ ಮರಗಳೂನೂವೇ, ಎಂದಿಗೆ ಬಿದ್ದು ಹೋಗತ್ತೋ ಹೇಳೋಕ್ಕೆ ಬರೊಲ್ಲ, ಕಡಿದ್ಹಾಕೋದೇ ವಾಸೀ ಅಂತ ಅವರು ಹೇಳಿದ್ರೆ, ಇವರು ಏನು ಹೇಳತಾರೆ ಗೊತ್ತಾ?...ನನಗೂ ಹತ್ತತ್ರ ಎಪ್ಪತ್ತು ವರ್ಷ, ನಾನೂ ಯಾವಾಗ ಬೇಕಾದ್ರೂ, ನೆಗೆದು ಬಿದ್ದು ಹೋಗಬಹುದು - ಹಾಗೇ ಅಂತ ಹೇಳಿ ನನ್ನನ್ನೂ ಕಡಿದ್ಹಾಕಿಬಿಡಿ ಅಂತ ಕೂಗಾಡಿ ರಂಪ ಎಬ್ಬಿಸತಾ ಇರತಾರೆ....ಕಡಿಯೋಕ್ಕೆ ಅಂತ ಕಾರ್ಪೊರೇಷನ್‌ನವರು ಬಂದ್ರೆ, ನನ್ನನ್ನ ಮುಂಚೆ ಕಡೀರೀ ಅಂತ ಮರಗಳನ್ನ ಅಪ್ಪಿಕೋತಾರೆ... ಇವರಿಗೆ ಷಾಮೀಲಾಗಿ ಒಂದು ಹತ್ತು ಜನ unemployed engineer ಹುಡುಗರು ಬೇರೆ... ಜತೆಗೆ ಒಂದು ಮೂರು ನಾಕು ಲೋಕಲ್ ಪೇಪರ್ನೋರೂ ಕೂಡ ಇವರನ್ನ ಅಟ್ಟಕ್ಕೇರಿಸಿ ಬರೀತಾ ಇರತಾರೆ. ಸರಿ, ಕೇಳೋದ್ ಬೇಕಾ, ಒಳ್ಳೆ ಕೋತೀಗೆ ಹೆಂಡಾ ಕುಡಿಸಿದ ಹಾಗೆ ಆಡತಾ ಇರ್ತಾರೆ...ಏನು ಸಾಯಲೀ ಸೂರಿ, ಇವರನ್ನು ಕಟ್ಟುಕೊಂಡು?...''

''ಅದೇನೋ ಇನ್ನೊಂದು ಹೇಳತಾರಲ್ಲ ಅತ್ತೆ, ಕೋತಿ ಕೈನಲ್ಲಿ ಮಾಣಿಕ್ಯ ಕೊಟ್ಟ ಹಾಗೆ ಅಂತ - ಹಾಗಾಯ್ತಲ್ಲ ನಿಮ್ಮ ಕಥೆ... ಆಯಿತು ನೋಡೋಣ, ಕೊಯಮತ್ತೂರು ಕೆಲಸ ಒಂದು ವಾರ ಆಗಬಹುದು ಅಲ್ಲಿಂದ ಬಂದ ಕೂಡಲೆ ಮಾವಂಗೆ ಹೇಳಿ ನೋಡತೀನಿ, ಇಂಥಾ ಅವಲಕ್ಷಣದ ಕೆಲಸಗಳನ್ನು ಬಿಟ್ಟು ಮನೇನಲ್ಲಿ ಬಿದ್ದಿರಿ ಅಂತ ....ಅಷ್ಟರ ಮೇಲೆ ನಿಮ್ಮ ಹಣೆಬರಹ ಇದ್ದ ಹಾಗಾಗತ್ತೆ...''

ಕೊಯಮತ್ತೂರಿನಲ್ಲಿ ಕೆಲಸ ಎಲ್ಲಾ ಮುಗಿಸ್ಕೊಂಡು ವಾಪಸ್ ಬಸ್ಸಿನಲ್ಲಿ ಬರೋವಾಗ ಹನುಮಂತೂ ಮಾವಂದೇ ಯೋಚನೆ-ಅದು ಹ್ಯಾಗೆ ಅವರಿಗೆ ಈ ಭೂತ ಬಿಡಿಸಲೀ ಅಂತ.

ಆದರೆ ಬೆಂಗಳೂರಲ್ಲಿ ಬಸ್ ಇಳಿಯೋವಾಗ ಅಲ್ಲೇ ಪಕ್ಕದಲ್ಲಿ news-standನಲ್ಲಿ ದೊಡ್ಡ ದೊಡ್ಡ headlines....ಏನಂತ ?

''ಕತ್ತೀಕಾಯಿ ಮರಗಳು ಕತ್ತರಿಸಿ ಬಿದ್ದವು - ಹನುವಂತರಾಯರು ಮೆತ್ತಗಾದರೆ?'', ಮೊದಲು ಮಾವನ್ನ ನೋಡಿಕೊಂಡು ಬರಬೇಕು, ಆಮೇಲೆ ಮನೇಗೆ ಹೋದರಾಯಿತು, ಅಂದುಕೊಂಡು ನೆಟ್ಟಗೆ ಅಲ್ಲಿಗೆ ಓಡಿದೆ.

ಅಲ್ಲಿ ಹೋದರೆ ಅತ್ತೆ ಹಾಲ್‌ನಲ್ಲಿ ಕೂತ್ಕೊಂಡು ಟಿ.ವಿ ನೋಡತಾ ಇದ್ದಾರೆ!

''ಅತ್ತೇ, ಹನುಮಂತೂ ಮಾವ?.....'' ಗಾಬರಿಯಿಂದಲೆ ಕೇಳಿದೆ.

''ರೂಮಲ್ಲೇ ಕೂತಿದಾರೆ, ನೋಡು ಹೋಗು..''

ಅಲ್ಲಿ ಹೋಗಿ ನೊಡತೀನಿ, ನೀವು ಸಿನೀಮಾದಲ್ಲಿ ನೋಡಿರಬಹುದಲ್ಲ victims of lock-up torture ಅಂಥನ್ನೋ ಮನುಷ್ಯರನ್ನ, ಹಾಗಿದ್ದರು ಮಾವ....ದೊಣ್ಣೆ ತಗೊಂಡು ಯಾರೋ ಯದ್ವಾ ತದ್ವಾ ತದಕಿ ಹೋದ ಹಾಗೆ ಮೈಯೆಲ್ಲಾ ಬಾಸುಂಡೆಗಳು...ಪಕ್ಕಕ್ಕೆ ತಿರುಗಿದ್ರೆ ಲಬೋ ಲಬೋ ಅನ್ನೋ ಥರಾ ಆಡೋರು.

''ಯಾರು ಮಾವ, ನಿಮಗೆ ಹೀಗೆ ಹೊಡೆದು ಹೋದೋರು?...ಪೋಲೀಸ್‌ನೋರಿಗೆ ಕಂಪ್ಲೈಂಟು ಕೊಟ್ಟಿದ್ದೀರಾ?''

''ಹಯ್ಯೋ, ಸ್ವಂತ ಅಳಿಯನ ಮೇಲೇನೇ ಕಂಪ್ಲೈಂಟು ಕೊಡೋಕ್ಕಾಗತ್ತಾ?..''

''ಅಂದ್ರೆ?....''

''ನಿಮ್ಮ ಅತ್ತೇನೆ ಕೇಳು ಹೇಳತಾಳೆ, ಏನಾಯ್ತೂ ಅನ್ನೋದನ್ನ...ನನಗೆ ಹೆಚ್ಚಿಗೆ ಮಾತನಾಡಿದ್ರೆ ದವಡೆ ನೋಯತ್ತೆ...''

ಅತ್ತೆ ಹೇಳಿದ ರೀತೀಲಿ ನಡೆದದ್ದು ಇಷ್ಟು:

ಅವರ ಅಳಿಯ ಸುರೇಶ ಮತ್ತೆ ಮಗಳು ಜಾನಕಿ, ಹೊಸದಾಗಿ Indica ಕಾರಿಂದು ಡಿಲಿವರೀ ತಗೊಂಡು ದೇವಸ್ಥಾನದಲ್ಲಿ ಪೂಜೆ ಮಾಡಿಸ್ಕೊಂಡು ಮನೇಗೆ ಬಂದರಂತೆ, ಅತ್ತೆ ಮಾವ ಅವರುಗಳನ್ನೂ ಒಂದು ರೌಂಡು ಸುತ್ತಿಸ್ಕೊಂಡು ಬರೋಣ ಅಂತ, ಇವ್ರುಗಳು ರೆಡಿ ಆಗತಾ ಇರೋ ಹೊತ್ನಲ್ಲಿ ಇವರ ಗೇಟಿನ್ ಮಂದೆ ಇದ್ದ ಕತ್ತೀಕಾಯಿ ಮರ, ಗೆದ್ದಲು ಹತ್ತಿತ್ತು ಅಂತ ಕಾಣತ್ತೆ ಧಡೀರ್ ಅಂತ ಆ ಹೊಸಾ ಕಾರಿನ್ಮೇಲೇನೇ ಬಿದ್ದು ಅದು ಹಪ್ಪ ಆಗಿ ಹೋಯ್ತಂತೆ. ಹೊಸಾ ಕಾರಿಗೆ ಹೀಗೆ ಆಯ್ತಲ್ಲಾ ಅನ್ನೋ ಕೋಪಕ್ಕೆ ಸುರೇಶ ಅದೇ ಮರದ್ದು ಒಂದು ಕಡ್ಡಿ ಮುರಕೊಂಡು ಮಾವನಿಗೆ ಬೆಂಡೆತ್ತೋಕ್ಕೆ ಶುರೂ ಮಾಡಿದ್ನಂತೆ... ಕೊನೇಗೆ ಹನುಮಂತೂ ಮಾವನ ಕೈನಲ್ಲಿ ರಸ್ತೇನಲ್ಲಿರೋ ಎಲ್ಲಾ ಒಣಕಲು ಮರಗಳನ್ನ ಕತ್ತರಿಸಿ ಹಾಕೋದಕ್ಕೆ ಒಪ್ಗೆ ಕೊಡತೀನಿ, ಮತ್ತೆ ಇನ್ನು ಮುಂದೆ ಮಠದಲ್ಲಿ ಪುರಾಣ ಪ್ರವಚನ ಅನ್ನೋದು ಬಿಟ್ರೆ ಈ ರೀತಿ ಊರ ಉಸಾಬರಿ ಅನ್ನೋ ಕೆಲಸಗಳು ಯಾವುದಕ್ಕೂ ಹೋಗೊಲ್ಲ ಅಂತ ಪತ್ರ ಬರಸ್ಕೊಂಡ ಮೇಲೇನೇ ಅಂತೆ ಅವ್ರನ್ನ ಬಿಟ್ಟಿದ್ದು. ಮತ್ತೆ ಅವತ್ತೇ ಆ ಪತ್ರ ಹಿಡಕೊಂಡು ಹೋಗಿ ಕಾರ್ಪೋರೇಷನ್ನಿನವರನ್ನ ಕರಕೊಂಡು ಬಂದು ಎಲ್ಲಾವನ್ನೂ ಎದುರು ನಿಂತುಕೊಂಡು ಕಡಿಸಿದ ಮೇಲೇನೇ ಅಂತೆ ಅಲ್ಲಿಂದ ಹೊರಟಿದ್ದು.

ಆವಾಗ ಸಿಕ್ತೂ ನೋಡಿ, ಹನುಮಂತ ರಾಯರು ಮೆತ್ತಗಾದರೆ? ಅನ್ನೋ ಆ ಪೇಪರ್ನೋರ ಪ್ರಶ್ನೆಗೆ.

''ಎಂಥಾ ಅನ್ಯಾಯ! ಸುರೇಶ ಹೀಗೆ ಹೊಡೀ ಬಾರದಾಗಿತ್ತು, ಏನೇ ಆಗಲಿ''

''ಸದ್ಯ ಅವರಾಗೋ ಹೊತ್ತಿಗೆ ಅಷ್ಟಕ್ಕೇ ಬಿಟ್ಟರು. ಬೇರೆ ಇನ್ಯಾರಾದ್ರೂ ಆಗಿದ್ದಿದ್ರೆ, ದೇವರೇ ಗತಿ ಅಂತ ಆಗತಾ ಇತ್ತು.... ನಮ್ಮ ಕಾಲದಲ್ಲೆಲ್ಲ ಹುಣಸೆ ಬರಲು ಬಳಸತಾ ಇದ್ದದ್ದನ್ನ ಜಾನಕೀ ಯಜಮಾನರು ಕತ್ತೀಕಾಯಿ ಬರಲಲ್ಲೇ ಬಿಡಿಸಿದರು ಇವರಿಗೆ ಮೆಟ್ಟಿಕೊಂಡಿದ್ದ ಭೂತಾನ್ನ....''

★ ★ ★

ಪರಮೇಶಿ - "ಎಂ.ಪಿ."

-ಶ್ರೀಮತಿ, ಅರುಣಾ. ಆರ್. ಕಾರಂತ

ಮೊನ್ನೆ ಮೊನ್ನೆ ತನಕ ನಮ್ ನಿಮ್ಮಂತೆ ಸುಮಾರಾಗೆ ಸರಿಯಾಗಿ ಇದ್ದ ನಂ ಪರಮೇಶಿಗೆ ಅದೇನೋ ಹೊಸ ನಮೂನೆ ಕಾಹಿಲೆ ಹಿಡಕೊಂಡು ಬಿಟ್ಟಿದೆ. ಆ ಕಾಹಿಲೆ ಎಷ್ಟು ಜೋರಾಗಿತ್ತಂದ್ರೆ ಅದರ ಲಕ್ಷಣ ಹೆಚ್ಚು ಕಡಿಮೆ ಅವನ್ನ ಅಡಿಯಿಂದ ಮುಡಿಯ ತನ್ಕ ಆವರಿಸಿಕೊಂಡು ಬಿಟ್ಟಿದೆ. ಈ ಹಿಂದೆ ಅವನ ನೂರೆಂಟು ಅವ್ತಾರಗಳನ್ನ ಕಂಡ ನನ್ಗೆ ಇದಿನ್ನೊಂದು ಇವ್ನ ನೂರೊಂಭತ್ನೆ ಅವ್ತಾರ ಇರ್ಬೇಕು, ಒಂದ್ನಾಕ್ ದಿನ ಇದ್ದು ಮತ್ತೈದ್ನೆ ದಿನಕ್ಕೆ ನೆರೆನೀರು ಇಳಿದು-ಹೋದಂತೆ ಮಾಮೂಲಿಗೆ ಬರ್ತಾನೆ ಅಂತ ಸುಮ್ನಿದ್ದೆ, ಆದ್ರೂ ದಿನದಿಂದ ದಿನಕ್ಕೆ- ಈ ಬಾರಿ ಕಾಹಿಲೆ ಜಾಸ್ತಿ ಆಗ್ತಿದ್ದನ್ನು ಕಂಡು ಅವ್ನ ಅಪ್ಪ ಅಮ್ಮ ನನ್ನತ್ರ ಓಡೋಡಿ ಬಂದ್ರು. "ನಂ ಪರಮೇಶಿಗೆ ಏನೋ ಆಗೇದ ಅದ್ಕ ನಿನ್‌ತಾವ ಓಡಿ ಬಂದ್ವಿ" ಅಂದ್ರು. "ಅಲ್ರೀ ಪರಮೇಶಿಗೆ ಏನೊ ಆಗಿದ್ರೆ ಅವ್ನ ಹತ್ರ ಹೋಗೋದು ಬಿಟ್ಟು, ನನ್ಗೇ ಏನೊ ಆದವ್ರಂಗೆ ಇಲ್ಲಿಗೆ ಯಾಕೆ ಬಂದ್ರಿ ಎಂದೆ". ಅಲ್ಲಿ ನೀವು ಅವ್ನಿಗೆ ಭಾಳ ಬೇಕಾದೋರೂಂತ, ನಿಮ್ಗೆ ತಿಳಿಸಿದ್ರೆ ನೀವೆ ಏನಾದ್ರೂ ಮಾಡಬಹುದು ಅಂತ ಬಂದ್ವಿ" ಅಂದರು.

ಇದೇನೂ ತೊಲಗೊ ಪೀಡೆ ಅಲ್ಲ ಅಂತ ಅನ್ನಿ ಅವ್ನಿಗೇನಾಗಿದೆ? ಆರಾಮಿಲ್ಲ? ಏನು? ಎಂಥ ಅಂಥ ಕಾಹಿಲೆ ಏನು ಬಂದಿದೆ ಅಂತ ವಿಚಾರಿಸಿದೆ'. ಅದ್ಕೆ ಅವ್ರು ನಿಮ್ ಪರಮೇಶಿ 'ಎಂ.ಪಿ.' ಆಗ್ಬೇಕಂತೆ ಹಗಲೂ ರಾತ್ರಿ ಅದ್ರ ಗುನುಗ್ನಾಗೇ ಇರ್ತಾನೆ. ಅಲ್ಲ, ನಾವು ಹಳ್ಳಿಯೋರು ಹೇಗೊ ಕಷ್ಟಪಟ್ಟು ಓದ್ಸಿ, ಒಂದ್ನೌಕ್ರಿ, ಅದೂ ಅವ್ರಿವ್ರ ಕಾಲುಹಿಡ್ದು ಇಪ್ಪತ್ತೈದೋ ಮೂವತ್ತೋ ಸಾವ್ರ ರೊಕ್ಕ ಖರ್ಚು ಮಾಡಿ ಮನೀ ತಾವ ಕೆಲ್ಸ ಕೊಡ್ಸಿದ್ರೆ- ಈಗ ಇದ್ದ ಕೆಲ್ಸಾನೂ ಕಳಕೊಂಡು ತನ್ನ ಅನ್ನಕ್ಕೆ ತಾನೇ ಕಲ್ಲ್ ಹಾಕ್ಕೋತಾನೋ ಅನ್ನೊಹಾಂಗ ಮಾಡ್ತಾನೆ, ಈಗ ಸುಸೂತ್ರ ಇಸ್ಕೂಲಿಗೂ ಹೋಗಾಕಿಲ್ಲ, ಶಿಸ್ತಾಗಿ ಬಟ್ಟೆನೂ ಹಾಕ್ಕೊಳಾಕಿಲ್ಲ ಪಾಯಿಜಾಮ, ಜುಬ್ಬ ಹಾಕ್ಕೊಂಡು ಬಗಲಾಗ ಸ್ಕೂಲ ಹುಡುಗರ ತರಹ ಬಗಲಚೀಲ ಏರಿಸ್ಕೊಂಡು ಅವ್ನ ಮದ್ವೆಕಾಲಕ್ಕೆ ಅವ್ನ ಮಾವ್ನ ಮನೆಯೋರು ಕೊಟ್ಟ ಕ್ಯಾಮರಾನ್ನ ಕೊರಳಿಗೆ ತೂಗ್ಹಾಕ್ಕೊಂಡು ಒಂದಿಷ್ಟ್ ಹಾಳೆ, ರೊಟ್ಟು, ಪೆನ್ನು ಹಿಡ್ಕೊಂಡು ಗಲ್ಲಿಗಲ್ಲಿ ಸುತ್‌ತಾನೆ ಯಾರ್ ಕರೀಲಿ ಕರೀದಿರ್ಲಿ, ಲೌಡ್ ಸ್ಪೀಕರ್

ಧನಿ ಕೇಳಿದ್ರೆ ಸಾಕು, ನಾಲ್ಕಜನ ಸೇರಿದ್ ಕಂಡ್ರ ಸಾಕು ಅಲ್ ಹೋಗಿ ಹಣಿಕಿ ಹಾಕ್ತಾನೆ ಗಡ್ಡ ಮಾಡ್ಕಳ್ದೆ ತಿಂಗ್ಳಮೇಲಾತು ಚಪ್ಲಿನೂ ಹಾಕೊಳಾಕಿಲ್ಲ ಕಾಲ್ಗೆ. ನಾವ್ಯಾರಾದ್ರೂ ಪರಮೇಶಿ ಯಾಕ್ಹೀಂಗಿದೀಯಾ ಅಂದ್ರ ಸಾಕು ''ನಾನ್ ಎಂ.ಪಿ'' ಗೊತ್ತೇನು? ' ಅಂತ ಬಡ್ಕಡಿಸ್ತಾನ. ಅವ್ನ ಒಣಕಲು ಮುಖ ನೋಡಿದ್ರೆ 'ಎಂ.ಪಿ' ಅಲ್ಲ ಮಂಡಲ್ ಮೆಂಬರಾಗ್ಲಿಕ್ಕೂ ನಾಲಾಯಖ್ ಇದ್ದಾಂಗಿದ್ದಾನೆ, ಅವ್ನ ಹೆಂಡ್ತೀದಾದ್ರೂ ಒಂದ್ವೋಟ್ ಬೀಳೊದು ಗ್ಯಾರಂಟಿ ಇಲ್ಲ. ಅಂತಾದ್ರಾಗ 'ಎಂ.ಪಿ' ಆಗ್ತಾನಂತ. ಒಟ್ಟಾರೆ ನಮ್ಮ ಹೊಟ್ಟೇಲಿ ಅಂವ ಹುಟ್ಟಿದ್ದಕ್ಕೆ ನಾವ್ ಹಣೆ ಚಚ್ಕೋಬೇಕಾಗ್ಯದ ಅಂದ್ರು.

ಇಷ್ಟೆಲ್ಲಾ ಕೇಳಿದ ಮೇಲೆ ಪರಮೇಶಿಯ ಕೇಸು ಸಾಮಾನ್ಯದ್ದಲ್ಲ ಅಂತ ಅರ್ಥವಾಯ್ತು,'' ಅಲ್ಲ, ಮತ್ತೆ ಪರಮೇಶಿನ ಇಲ್ಲಿಗ್ಯಾಕ ಕರ್‍ಕೊಂಡು ಬರ್‍ಲಿಲ್ಲ?'' ಅಂದೆ. 'ಹಯ್ಯೋ, ಕರ್‍ಕೊಂಡ್ ಬರೋದೆ!? ಮನಿಯಾಗಿದ್ರಲ್ಲ....? ಅದೇಸೊತ್ತಿಗ್ಬರ್ತಾನೊ, ಅದೆಲ್ಲಿಗ್ಹೊಗ್ತಾನೋ ಎಲ್ಲಿ ಉಣ್ತಾನೋ ಎಲ್ಲಿ ಮಲಗ್ತಾನೋ ಒಂದೂ ತಿಳಿಯಾಕಿಲ್ಲ' ಅಂದ್ರು ಅವನ ಅಪ್ಪ ಅಮ್ಮ. ''ಹೋಗ್ಲಿ, ಅವ್ನ ಹೆಂಡ್ತಿನಾದ್ರೂ ಕೇಳಿದ್ರಾ ಅಂವ ಎಲ್ಲಿ ಮಲಗ್ತಾನ ಏನೂ ಅಂತ'' ಅಂದೆ, ನೋಡ್ರಿ ನಮ್ದು ಒಕ್ಕಲುತನದ ಕಸುಬು, ಅಷ್ಟಿಷ್ಟು ಹೊಲ ಗದ್ಧಿ ಐತಿ ನಾಳಿ ಒಂದ್ಮಳೀ ಬತ್ತಂದ್ರ ನಾವ್ಯಾರೂ ಕುಂಡ್ರು ಹಂಗಿಲ್ರಿ, ಮೈ ತುಂಬ 'ಕೆಲ್ಸ-ಬೊಗ್ಸೆ ಇರ್‍ತೈತಿ, ಹೆಣ್ಣಾಳು ಎಷ್ಟಿದ್ರೂ ಸಾಲೂದಿಲ್ರಿ. ಇನ್ನು ಇದೇ ಹೊತ್ಗೆ ಪರಮೇಶಿ ಹೆಂಡ್ತಿನೂ ನೀರು ನಿಲ್ಸಂಡ್ಬಿಟ್ರೆ ಹೊಟ್ಟಿಗೆ ಮಣ್ಣ್ ಹಾಕ್ಕೋಬೇಕಾಗ್ತೈತ್ರಿ, ಅದ್ಕೆ ನಾವ್ ಆಕೀನ್ನ ಅಂವ್ನ ಬಳಿ ಹೋಗ್ಬೇಡಾ ಅಂದಿವ್ರೀ ಅಂದ್ರು.

ಇವ್ರ ಮಾತ್ಕೇಳಿ ನನ್ಗೆ ನಗ್ಬೇಕೊ ಅಳ್ಬೇಕೊ ತಿಳೀಲಿಲ್ಲ ಅಲ್ಲ, ಹಳ್ಳಿ ಹಳ್ಳಿಗೆಲ್ಲಾ ಆಸ್ಪತ್ರಿ ತಗ್ದಾರ, ಬಾಯಮ್ಮರಿರ್‍ತಾರ, ಗುಳಿಗಿ, ಚೀಲ, ಪುಗ್ಸಟೆ ಹಂಚ್ತಾರ ಅಂತಾದ್ರಾಗ ಸೊಸಿಗ ನೀರ್ ನಿಲ್ತದಂತ ದೂರಿಟ್ಟಾರಲ್ಲ ಏನ್ಮಂದಿನೊ ಅಂದ್ಕಂಡೆ.

ಏನೇ ಆಗ್ಲಿ ಪರಮೇಶಿ ನನ್ನ ಲಂಗೋಟಿ ಗೆಳೆಯ ಆಗಿದ್ದಕ್ಕೆ ಏನಾರ ಮಾಡ್ಬೇಕು ಅಂದ್ಕೊಂಡು ಅವ್ನ ಅಪ್ಪ ಅಮ್ಮಂಗ ಸಮಾಧಾನ ಹೇಳಿ ನಾನೇ ಸ್ವತಃ ಅವನ್ನ ಕಾಣ್ಬೇಕಂತ ನಿರ್ಧರಿಸಿದೆ.

ಪರಮೇಶಿನ್ನ ಎಲ್ಲಂತ ಹುಡುಕ್ಲಿ? ಏನ್ಮಾಡ್ಲಿ? ಅಂವ್ನಿಗ್ಹಿಡಿದ ಕಾಹಿಲೆ ಏನೂಂತ ತಿಳೀತು, ಆದ್ರೆ.....? ಇನ್ನು ಅಂವ್ನ ಹುಡುಕೂದಂದ್ರೆ ನಾನೂ ಅಂವ್ನಾಂಗೇ ಆಗ್ಬೇಕು. ಆಗ ಮಾತ್ರ ಅಂವನ್ನ ಪತ್ತೆ ಮಾಡೂದು ಸಾಧ್ಯ

ಅಂತನ್ನಿಸಿತು. ನಾನೂ ಅಂವ್ನಂಗೆ ಬಿಸಿಲು ಮಳೆ ಅನ್ನದೆ ಎಲ್ಲಾ ತರದ ಸಭೆ ಸಮಾರಂಭ, ಮದ್ವಿ, ಮಸಣ, ಜಗಳ, ದೊಂಬಿ ತನ್ಕ ಅಲೆದೆ. ಅದ್ರಿಂದ ಚಪ್ಲಿ ಸವೀತೇ ಯೊರತು ಅವ್ನ ಸುಳಿವು ಸಿಗಲಿಲ್ಲ. ಇದ್ರಿಂದ ನನ್ಗಿಷ್ಟು ಹೊಸ ಅನುಭವ ಸಿಗ್ತು, ಕೆಲವು ಕಡೇಲಿ ಜನ ನನ್ನ ಭಿಕ್ಷುಕ ಅಂದ್ಕೊಂಡು ಭಿಕ್ಷಾನೂ ಹಾಕಿದ್ರು, ಇನ್ನು ಕೆಲವು ಕಡೆ ಹುಡುಗ್ರು ಹುಚ್ಚಾ, ಅಂದ್ಕೊಂಡು ನನ್ಕಡೆ ಕಲ್ಲು ತೂರಿದರು, ಮತ್ತೆ ಕೆಲವರು ನಾನ್ಯಾರೊ ವೇಷ ಮರೆಸಿಕೊಂಡ ಸಿ.ಐ.ಡಿ. ಅಂತ ನನ್ನ ಕಂಡು ಗಪ್, ಚುಪ್ ಆದದ್ದಲ್ಲದೆ ನನ್ನ ಮೇಲೇನೇ ಪತ್ತೇದಾರಿಕೆ ನಡೆಸಿದರು. ಇನ್ನೊಂದ್ಕಡೆ ಒಂದಿಷ್ಟು ಜನ ನನ್ನ ಹಿಡಿದು ಕಟ್ಟೂ ಹಾಕಿದ್ದರು. ಅಂತೂ ಅವ್ರ ಕೈಯಿಂದ ತಪ್ಪಿಸ್ಕೊಂಡು ಬರೂದಂದ್ರೆ ಹರಸಾಹಸ ಆಯ್ತು, ಕೊನೆಗೂ ಸುತ್ತಿ, ಸುತ್ತಿ, ನಿದಿ ಪರಮೇಶಿಯೇ ಎಂದು ಖಾತ್ರಿಯಾಗಿ 'ಯುರೇಕಾ' ಅಂತ ಕೂಗ್ಬೇಕಂತನ್ನಿಸ್ತು ಆದ್ರೆ ಕೂಗ್ಲಿಲ್ಲ ಅಷ್ಟೇ ಒಂದೇ ಉಸಿರಿಗೆ ಅವನತಾವ ಹೋದೆ, ''ಪರಮೇಶಿ ಪರಮೇಶಿ ಏನೋ ಹಿಂಗ್ಯಾಕ ಮಾಡ್ದಿ? ಮನೆಗೆ ಹ್ವಾಗಾಣ ಬಾರೊ'' ಎಂದು ಕರೆದೆ, ಆದ್ರೆ ಮಾತಿಲ್ಲ ಕತಿಯಿಲ್ಲ, ನನ್ನ ಮುಖ ಮುಖ ನೋಡ್ತಾನೇ ಇದ್ದ, ನಿಧಾನವಾಗಿ ನನ್ನ ಚಹರೆ ತಿಳಿದಂತೆ ಮುಖ ಅರಳಿಸಿ ಮತ್ತೆ ಮಂಕಾದ . ಅಲ್ಲೋ, ಪರಮೇಶಿ ನನ್ನ ಗುರ್ತು ಹತ್ಲಿಲ್ಲವೇ ನಾನೇ ಕಣೋ ನಿನ್ನ ಗೆಣೆಯ, ನಿನ್ನವ್ವ, ಅಪ್ಪ, ಮತ್ತ ನಿನ್ಹೆಂಡ್ತಿ ಎಲ್ಲಾ ಎಷ್ಟೊಂದು ಗಾಬರಿಯಾಗ್ಯಾರ ಗೊತ್ತೋ? ''ನಿನ್ನ ಹುಡ್ಕಿ ಹುಡ್ಕಿ ಆಶೆ ಬಿಟ್ಟು ಪೇಪರಿಗ್ಹಾಕೊದೊಂದು ಉಳಿದ್ಯೆತಿ ನೋಡು, ಅಲ್ಲಿ ಸುಮ್ನೆ ಹೊಲಾ ಮಾಡ್ಕೊಂದು ಸುಖವಾಗಿ ಉಂಡು ತಿಂದು ಇರ್‍ಬಾರ್ದೇ! ಈ ಅವ್ತಾರ ಎಲ್ಲಾ ಏನು'' ಎಂದೆ.

''ಛಿ,ಛಿ,ಛೀ ನಾ.....ಹೋಗಾಕಿಲ್ಲ, ಅಲ್ಲೇನೈತೆ? ಬರಿ ಮಣ್ಣೂ ಡಸ್ಟೂ, ನೋ ರೆಸ್ಪೆಕ್ಟೂ, ಅವ್ರೆಲ್ಲಾ ಪೂಅರ್, ಪೂರ್ ಲೇಮನ್ನು, ಶುದ್ಧ ಹಳ್ಳಿಗುಗ್ಗು, ಅವ್ರಿಗೊ ಕಲ್ಚರೂ ನೇಶನ್ನೂ, ವ್ಯಾಲ್ಯೂಸ್ ಅಂದ್ರ ಏನೂ ಅಂಡರ್‌ಸ್ಟಾಂಡ್ ಆಗಲ್ಲ, ನನ್ನ ಎಂಬೀಶನ್ನೇ ಬೇರೆ, ನನ್ನ ಥಿಂಕಿಂಗ್ ದಾರಿನೇ ಬೇರೆ, ನಾನು ''ಎಂ.ಪಿ'' ಆಗ್ಬೇಕಂತ ಹೊರಟಿದ್ದೆ. ಅದೇ ನನ್ನ ಗೋಲು, ಡೆಕ್ಟಿನೇಶನ್ನು, ಅದ್ನ ಅಚೀವ್ ಮಾಡೇ ಮಾಡ್ತೀನಿ, ನೋಡು ಈ ಮೀಡಿಯಾ ಪರ್ಸನ್ನು ಅಂದ್ರೆ ಎಂತೆಂಥೊರು ಗಡ್‌ಗಢಾ ಅಂತ ನಡಗ್ತಾರೆ. ಪೋಲೀಸ್ನೋರಿರಲಿ, ಪೊಲಿಟೀಶಿಯನ್ನೇ ಇರ್ಲಿ, ಅಂಬಾಸಿಡರೇ ಇರ್ಲಿ ಆರ್ಮಿ ಹೆಡ್ಡೇ ಇರ್ಲಿ ನಮ್ಮೆದ್ರಿಗೆ ಅವ್ರ ಪುಂಗಿ ಎಲ್ಲಾ ಬಂದ್, ನೋಡು; ಆ ಕನ್ನಡದ ತೇಜಸ್ವಿನೀನ್ನ ನೋಡು, ಕರಣ್ ಥಾಪಾರನ್ನೇ ನೋಡು, ಅರುಣ್ ಶಾರಿನ್ನ ನೋಡು ಎಂತೆಂಥೌರೆಲ್ಲ ಅವ್ರು

ಬಾಯ್ಕಳದ್ರ ಅಂದ್ರೆ ಬೆಬೆಬ್ಬೆSS ಅಂತಾರೆ ಬಕ್ರಾಗಳಾಂಗೆ, ಅದು ಹೋಗ್ಲಿ ನೀನನ್ನಷ್ಟಲ್ದಿದ್ರೂ, ಸುಮಾರಾಗಿ ಪಬ್ಲಿಕ್ ಫಂಕ್ಷನ್ನ ಅಟೆಂಡಾಗಿದ್ದಿಯಾ, ಎಲ್ಲಾ ಕಡೆನೂ ಪ್ರೆಸ್‌ನವ್ರಿಗಂತ ಸಪರೇಟ್ ಸ್ಪೇಸ್ ರಿಝರ್ವ್ ಮಾಡಿರ್‍ತಾರ. ಅವು ಬಂದ್ರೆಂದ್ರೆ ಎಷ್ಟೇ ನೂಕುನುಗ್ಗಲಿದ್ರೂ, ಅವ್ರನ್ನ ಕರೆದುಕೊಂಡ್ಹೋಗಿ ಒಳಗೆ ಕೂಡಿಸ್ತಾರ, ಅವ್ರಿಗಿರೊ ರಿಸ್ಪೆಕ್ಟು ಅವ್ರಿಗಿರೊ ತಾಕತ್ತು ಯಾರಿಗೂ ಇಲ್ಲ ಬಿಡು. ನೋಡು ನಿನ್ಗ ಸಂಬಳ ಎಷ್ಟಿರುತ್ತೇಳು; ಹದಿನೈದೊ ಇಪ್ಪತ್ತೊ ನಾವ್ರ ಬರ್‍ತಿರ್‍ತ್ಬೌಹುದು, ಆದ್ರೆ ರಸ್ತೇಲಿ ಹೋಗ್ಬಾಗ ನಿನ್ಯಾರಾದ್ರೂ ಗುರ್ತಿಸ್ತಾರಾ? ನಿನ್ನತ್ರ ಅಧಿಕಾರ ಇರ್‍ಬಹುದು, ನಿನ್ನಾಫೀಸ್ನಲ್ಲಿ, ಹೊರಗಡೆ ಬಂದ್ರೆ ಹತ್ತು ಜನರ್‍ಥಂಗೆ ನೀನೂ ಒಬ್ಬ, ಆದ್ರೆ ನಾನು 'ಎಂ.ಪಿ' ಆದ್ರೆ ನನ್ಗೆಷ್ಟು ಜನ ಮರ್ಯಾದೆ ಕೊಡ್ತಾರೆ ಗೊತ್ತಾ, ಜನಾ ರೆಕಗ್ನೈಸ್ ಮಾಡ್ತಾರೆ ಗೊತ್ತಾ! ನಿನಗದೆಲ್ಲಾ ತಿಳಿಯಾಕಿಲ್ಲ ನೀ ಹೋಗು, ನಮ್ ಫಾದರ್‍ರು, ಮದರ್‍ರು ಸಿಕ್ರೆ ನಾನು ಅಳ್ಳಿಗ್ ಬರಾಕಿಲ್ಲ, ನನ್ನ್ ಕಾಣ್ಬೇಕೂ ಅಂದ್ರೆ 'ಟಿ.ವಿ',ಯಲ್ಲೇ ಕಾಣ್ಬೌದು ಪೇಪರ್‍ನಾಗ್ ನೋಡ್‌ಬಹುದು ಅಂತ್ಹೇಳು ಅಂದ.

ಒಳ್ಳೇ ಗ್ರಹಚಾರ ಬಂತಲ್ಲ ಇದು, ಧಡ್ರಿಗಾದ್ರು ಬುದ್ಧಿ ಹೇಳ್ಬೌದು ಬುದ್ಧಿವಂತರಿಗಾದ್ರೂ ಹೇಳ್ಬೌದು, ಈ ಅರ್ಧಂಬರ್ಧ ಜ್ಞಾನ ನೆತ್ತಿಗೇರಿದ ಎಡಬಿಡಂಗಿಗಳಿಗೆ ಸಮಜಾಯಿಸುವುದು ಹೇಗಪ್ಪ ಅಂದ್ಕೊಂಡೆ. ''ಹೋಗ್ಲಿ ಪರಮೇಶಿ ನೀ ಮನಿ ಬಿಟ್ಟು ಎಷ್ಟ್ ದಿವ್ಸಾಯ್ತು? ಇಷ್ಟ್ರಾಗಿ ಎಷ್ಟ್ ಜನ್ರದ್ದುಇಂಟರ್‌ವ್ಯೂ ಮಾಡ್ದಿ? ಎಷ್ಟು ಪ್ರೆಸ್ ರಿಪೋರ್ಟ್ ಕಳ್ಸಿದ್ದಿ? ಅದ್ರಾಗೆಷ್ಟ್ ಪಬ್ಲಿಷ್ ಆಯ್ತು? ಎಷ್ಟು ದಿನ ಹೊಟ್ಟೆ ತುಂಬ ಉಂಡ್ ಕಣ್ತುಂಬ ನಿದ್ದೆ ಮಾಡಿದ್ದಿ? ಯೋಚ್ನೆ ಮಾಡು. 'ಎಂ.ಪಿ' ಆಗೋದು ನೀ ತಿಳ್ಕಂಡಷ್ಟು ಹಗುರ ಅಲ್ಲ, ನಿನ್ಥಂಗೆ ಸಂಸಾರ ಬಿಟ್ಟು ಅರೆಹೊಟ್ಟೆ ಅರೆಬಟ್ಟೆ ಮ್ಯಾಲೆ ಊರೂರು ಅಲ್ದ್ರೆ ಯಾರೂ 'ಎಂ.ಪಿ' ಆಗಲ್ಲ, ಅದ್ಕೂ ಪರಿಶ್ರಮ ಬೇಕು ಅದೃಷ್ಟನೂ ಬೇಕು. ನೀನು ಎಜ್ಯುಕೇಟೆಡ್ ಇದ್ದಿ, ನಿಂಗೂ ಜವಾಬ್ದಾರಿ ಐತಿ, ಅದ್ನ ಅವಾಯ್ಡ್ ಮಾಡ್ದಂಗಿಲ್ಲ ನೋಡು, ಇನ್ನಾದ್ರೂ ಸ್ವಲ್ಪ ಬಣ್ಣದ್‌ಪೆಟ್ಗೆ ನೋಡಿ ಮನಸ್ನಾಗೆ ಮಂಡಿಗೆ ತಿನ್ನೋದ್ನ ಬಿಡು. ಮೊದ್ಲಿಗೆ ನಿನ್ನ ಕಾಲ್ಮೇಲೆ ನೀನು ನಿಲ್ಲು, ಜತಿ ಜತಿಗೆ ಜರ್‍ನಾಲಿಸಂ ಸ್ಟಡಿ ಮಾಡು. ನಂತ್ರ ಅವಕಾಶ ಸಿಕ್ಕೇ ಸಿಕ್ಕತ್ತೆ. ಟಿ.ವಿ.ಯಲ್ಲಿ ಬಂದ್ರ ಮಾತ್ರ ನೀನ್ ದೊಡ್ಡ ಜನ ಆಗ್ತೀಂತ ತಿಳೀಬೇಡ. ನಿಮ್ಮಳ್ಳೀಗೋಗು ನಿನ್ನ ಹೊಲ್ದಾಗ ನೀನು ಏನಾದ್ರೂ ಸಾಧಿಸಿ ತೋರ್‍ಸು. ಜನ-ಸರ್ಕಾರ ನಿನ್ನ ಗುರ್ತಿಸತ್ತೆ, ಒಂದ್ವೇಳೆ ಗುರ್ತಿಸಲ್ಲ ಅಂತಿಟ್ಕೊ, ಅದ್ರಿಂದ ಕೆಟ್ಟೋಗೋದೇನೂ ಇಲ್ಲ. ನೀನಂತೂ

ಸುಖವಾಗಿರ್ತೀಯಾ, ಸುಮ್ನೆ ಅವ್ರಿವ್ರ ಜಾತ್ಕಾ ಜಾಲಾಡೋದ್ಬಿಟ್ಬು ನಿನ್ನವಿಷ್ಯ ಸರಿಯಾಗಿಟ್ಕೋ ಅಂದೆ.

ಯಾಕೋ ಮಾರಾಯ ಸುಮ್ನಾದ, ನನ್ನ ಅದೃಷ್ಟ ಚಲೋ ಇತ್ತು. ಅವ್ನ ತಲೀನೂ ನೆಟ್ಟಗಾಗಿತ್ತು. ಅಂತೂ ನಾನಂದಿದ್ದು ಅವ್ನಿಗೆ ತಾಗ್ತು ಅಂತ ಕಾಣ್ತದ, ಅಂವ ಕುಂತಲ್ಲಿಂದೆದ್ದು ಬಟ್ಟೆ ಕೊಡವಿಕೊಂಡು ಹು, ಎಲ್ಲಾರ ಹೋಟ್ಲಿಗೋಗಾಣ, ಹೊಟ್ಟೆ ಭಾರಿ ಚುರುಗುಡ್ತೈತಿ, ನಂತ್ರ ಊರಿಗ್ಹೋಗೋಣಂತೆ'' ಅಂದ.

ಈಗ ಮೀಡಿಯಾ ಪರ್ಸನ್ ಆಗೋ ಕನ್‌ಸೊತ್ತ ನಮ್ ಪರಮೇಶಿ ಆದರ್ಶ ಶಿಕ್ಷಕನಾಗಿ ಪ್ರಗತಿಪರ ರೈತನಾಗಿ ನಿಜಕ್ಕೂ 'ಎಂ.ಪಿ' ಆಗಿದ್ದಾನೆ. ಅಂವ್ನ ಮನೆಬಾಗಿಲಿಗೆ ಮಿಸ್ಟರ್ ಪರಮೇಶ್ವರಪ್ಪ ಲ್ಯಾಂಡ್‌ಲಾರ್ಡ್ (ಎಂ.ಪಿ) ಅನ್ನೋ ಬೋರ್ಡ್ ಹಾಕಿಕೊಂಡಿದ್ದಾನೆ.

ಮನೆ ತುಂಬಾ ಸರಕು

ಕಾನ್‌ತುಂಬ ಗಿಡಗಂಟಿ ರಾಶಿ ರಾಶಿಯ ದೆರಕು
ಮನೆತುಂಬ ಪ್ರಕೃತಿ ಮಗು ಬಡಗೃಹಿಣಿ ಕೂಡಿಸಿದ
ಒಂದಲ್ಲ ಒಂದು ದಿನ ಉಪಯೋಲ್ ಬಂದೀತು
ಎಂದು ಗೋಳೀ ಹಾಕಿ ಮಡಗಿಟ್ಟ ಸರಕು

ಹಳೆಯ ಗೋಣೀ ಚೀಲ, ಹರಕು ವಸ್ತ್ರದ ಶಿಂಬೆ
ಖಾಲಿ ರಟ್ಟಿನ ಡಬ್ಬಿ, ಖಾಲಿ ದಬರಿಯ ಜಂಗು
ಬಾಯ್‌ಮುರಿದ ಬಾಟ್ಲಿಗಳು, ಹಳೆಯ ಕೆಲೆಂಡರ್ ಗೊಂಬೆ
ಮುಟ್ಟಿದರೆ ದಡಬಡಾ ಉರುಳುವವು, ಏನೆಂಬೆ!

ನನ್ನ ಸಹನೆಗು ಕೂಡ ಉಂಟಲ್ಲ ಮಿತಿಯು?
ಈ ಸರಕುಗಳನೆಲ್ಲ ಇಂದು ತಿಪ್ಪೆಗೆ ತೂರಿ
ಕೈ ಸೊಳೆದು ಕೊಳ್ಳುವೆನು, ಬಹಳ ಚೆನ್ನಾಗಿಹುದು
ಈ ವಾರ ನಕ್ಷತ್ರ, ಇಂದಿನದೆ ತಿಥಿಯು

– ವಿ.ಜಿ. ಭಟ್ಟ

ಬೋಳಾಯಣ

– ಅಣ್ಣಾಸ್ವಾಮಿ ಮೊದಲಿಯಾರ್

ಬೇಸಿಗೆ ಬಂತೆಂದರೆ, ಬಿಸಿಲಿನ ತಾಪ ತಾಳಲಾರದೆ ತಲೆಯ ಮೇಲಿನ ಕೂದಲನ್ನು ಸಣ್ಣಗೆ ಕತ್ತರಿಸಿಕೊಳ್ಳುವುದು ವಾಡಿಕೆ-ಇದಕ್ಕೆ 'ಸಮ್ಮರ್ ಕಟ್' ಎನ್ನುತ್ತೇವೆ. ಕೆಲವು ಜನ ಅಪ್‌ಟುಡೇಟ್ ಅಮ್ಮಯ್ಯನವರು 'ಬಾಯ್ ಕಟ್' ಅಂತ ಕೂದಲು ಕತ್ತರಿಸಿಕೊಂಡು, ಪ್ಯಾಂಟು ಜರ್ಕಿನ್ ಹಾಕ್ಕೊಂಡು ರಸ್ತೇಲಿ ಹೋಗ್ತಾಯಿದ್ದರೆ ದೂರದಿಂದ ನೋಡಿದಾಗ ಗಂಡೋ-ಹೆಣ್ಣೋ ಗೊತ್ತಾಗಲ್ಲ. ಮುಸ್ಲಿಂ ಸಹೋದರರು ಮೆಕ್ಕಾ ಮದೀನಾಗೆ ಹೋದಾಗ ನುಣ್ಣಗೆ ತಲೆ ಬೋಳು ಹೊಡೆಸಿಕೊಳ್ಳುವುದನ್ನು ಕಂಡಿದ್ದೇವೆ. ನಮ್ಮ ಹಿಂದೂಗಳಲ್ಲಿಯೂ ಕಡಿಮೆಯಿಲ್ಲ ಪಳನಿಗೆ ಹೋದಾಗ, ನಂಜನಗೂಡಿಗೆ ಹೋದಾಗ, ಎಲ್ಲಕ್ಕಿಂತ ಮಿಗಿಲಾಗಿ ತಿರುಪತಿಗೆ ಹೋದಾಗ ಕೂದಲನ್ನು ದೇವರಿಗೆ ಒಪ್ಪಿಸಿ 'ಜೈ' ಅಂತ ಮಾಡಿದ ಪಾಪವನ್ನೆಲ್ಲಾ ಕಳಕೊಂಡು ಬರುವುದನ್ನು ನೋಡುತ್ತಲೇ ಇರುತ್ತೇವೆ.

ನಾನೇನೂ ಹೊರತಲ್ಲ, ತಿರುಪತಿ - ತಿರುಮಲಕ್ಕೆ ದೇವರ ದರ್ಶನಕ್ಕೆ ಹೋಗುತ್ತಲೇ ಇರುತ್ತೇನೆ. ಎಷ್ಟಾದರೂ ನಮ್ಮ ಮನೆದೇವರಲ್ಲವೇ? ಪ್ರತಿಸಲ ಅಲ್ಲದಿದ್ದರೂ ಬಹಳಷ್ಟು ಸಲ ತಲೆ ಕೂದಲನ್ನು ವೆಂಕಟರಮಣನ ಪಾದಗಳಿಗೆ ಅರ್ಪಿಸಿ 'ಗೋವಿಂದ' ಅಂತ ಹಗುರವಾದ ಹೃದಯದಿಂದ ವಾಪಸ್ಸು ಬಂದಿದ್ದೇನೆ. ಒಂದು ಸೀಜನ್ನಿನಲ್ಲಿ ತಿರುಪತಿಗೆ ಹೋಗಿ ಬೋಳು ಮಾಡಿಕೊಂಡು ಬಂದ ಮೇಲೆ ಮೂರು-ನಾಲ್ಕು ತಿಂಗಳಿನಲ್ಲಿ ಕೂದಲು ಬೆಳೆದು ಕ್ರಾಪ್ ಬಿಡುತ್ತಿದ್ದೆ. ನನ್ನ ಮಾಮೂಲಿ hair dresser ನರಸಿಂಹ್ಮಯ್ಯ ನನ್ನ ನೋಡಿ ''ಪರವಾಗಿಲ್ಲ ಕೂದಲು ಬಿಟ್ಟಿದ್ದಾನೆ ಹೇರ್ ಕಟ್ಟಿಂಗ್‌ಗೆ ಬರ್ತಾನೆ'' ಅಂತ ಆಸೆಗಣ್ಣುಗಳಿಂದ ನೋಡುತ್ತಿದ್ದ. ಆದರೆ ನಾನು ಯಾವುದೋ ನೆಪದಿಂದ ತಿರುಪತಿಗೆ ಹೋಗಿ ಕೂದಲು ಒಪ್ಪಿಸಿ ಬರ್ತಿದ್ದೆ. ನರಸಿಂಹ್ಮಯ್ಯ ನನ್ನ ಬೋಡು ತಲೆ ನೋಡಿ ಮನಸ್ಸಿನಲ್ಲೇ ಶಪಿಸಿಕೊಳ್ಳುತ್ತಿದ್ದ, ಈಗ ಹಾಗಲ್ಲ ಬಿಡಿ.

ಈ ಕಾಲದಲ್ಲಿ ಜನ ತಿರುಪತಿಗೆ ಹೋಗಿ ಹರಕೆ ಅಂತ ಐದುಕಡೆ ಐದಾರುಕೂದಲುಗಳನ್ನು ಒಂದೆರಡು ಎಳೆ ಕತ್ತರಿಸಿಕೊಂಡು 'ಪಂಚಮುಡಿ' ಒಪ್ಪಿಸಿದೆ ಎಂದು ಹೇಳಿ ಕೈಮುಗಿದು ಬರ್ತಾರೆ.

ಎಷ್ಟಾದರೂ ಸಾಫ್ಟ್‌ವೇರ್ ಯುಗ ಸ್ವಾಮಿ।

ಆಫ್ರಿಕಾದವರು ನೋಡಿ, ಅವರಿಗೆ ಕೂದಲು ಬೆಳೆಯುವುದೇ ಇಲ್ಲ. ಸುರುಳಿಸುತ್ತಿಕೊಂಡ ಗುಂಗುರು ಕೂದಲು ಸಣ್ಣಗೆ ಕುರಿ ತುಪ್ಪಟದ ಹಾಗೆ ಬೆಳೆದು

ಅವರಿಗೆ ಹೇರ್‌ಕಟಿಂಗ್ ಬೇಡ ಅಂತಕಾಣತ್ತೆ. ಅವರಿಗೆ ದೇವರಿತ್ತವರ. ಕರಿ ಹೆಂಗಸರುಗಳಲ್ಲಿ ಉದ್ದನೆಯ ಕೂದಲಿರುವವಳೇ ಅವರ ಪಾಲಿಗೆ ಸುರಸುಂದರಿ ಅಂತ ಕಾಣತ್ತೆ.

ಇತ್ತೀಚೆಗೆ ನನ್ನ ಅಣ್ಣನವರು ತೀರಿಕೊಂಡ ಕಾರಣ ಶಾಸ್ತ್ರದಂತೆ ಬೋಡು ಮಾಡಿಕೊಳ್ಳಬೇಕಾಯಿತು. ಮೊದಲೇ ನಾನು ದಪ್ಪ ಗುಂಡು ಮುಖ, ನೀಳಮೂಗು ದೊಡ್ಡದಾದ ಕಣ್ಣುಗಳು ದಷ್ಟಪುಷ್ಟ ಮೈಕಟ್ಟು ಎಷ್ಟಾದರೂ ಚಿಕ್ಕವಯಸ್ಸಿನಲ್ಲಿ ಗರಡಿಯಲ್ಲಿ ವ್ಯಾಯಾಮಮಾಡಿ ಈ ಬಿಟ್ಟಿ ಮೈ ಬೆಳೆಸಿಕೊಂಡವನಲ್ಲವೇ? ನಮ್ಮ ಗರಡಿ ಉಸ್ತಾದ್ ಆದೇಶದಂತೆ ನಮ್ಮ ಗರಡಿ ಪೈಕಳೆಲ್ಲಾ ದೊಡ್ಡದಾದ ಮೀಸೆ ಬಿಟ್ಟಿರುತ್ತೇವೆ. ಒಂದು ರೀತಿ ದೊಡ್ಡ ಮೀಸೆಗೂ ಮೈಕಟ್ಟಿಗೂ ಹೊಂದಾಣಿಕೆ ಇರುತ್ತೆ. ಪರ್ಸನಾಲಟಿಯಲ್ಲಿ ಜಬರ್ದಸ್ತು ಗಮ್ಮತ್ತು ಇರುತ್ತೆ.

ನಾನು ಬಳ್ಳಾರಿ ರಸ್ತೆಯಲ್ಲಿರುವ ನಮ್ಮ ಆಫೀಸಿಗೆ ಪ್ರತಿದಿನ ಹದಿನೈದು ಮೈಲಿ ಹೋಗಲು ಹದಿನೈದು ಬರಲು ಬಸ್ ಪ್ರಯಾಣ ಮಾಡ್ತೀನಿ. ಎರಡು ಮೂರು ಬಸ್ ಹತ್ತಿ ಪ್ರಯಾಣ ಮಾಡಬೇಕಾಗುತ್ತೆ. ಪ್ರತಿ ಬಸ್ಸಿಗೂ ಮೂರುವರೆ ರೂಪಾಯಿ ಟಿಕೆಟ್ ತೆಗೆದುಕೊಳ್ಳಬೇಕು. ಬಸ್‌ಗಳೂ ಬೇರೆ ಭಾರೀ ರಷ್, ಒಳಗೆ ಹೋದರೆ ಪುಣ್ಯ ಎಂಬ ಭಾವನೆ. ಸೀಟು ಬಿಡಿ ಸ್ಟಾಂಡಿಂಗೂ ಒಂಟಿಕಾಲಿನಲ್ಲಿ ನಿಲ್ಲಬೇಕು. ಈ ಗಲಾಟೇಲಿ ಕಂಡಕ್ಟರ್ 'ಚಿಲ್ಲರೆ ಇಲ್ಲ' ಅಂತ ಹೇಳಿ ಟಿಕೆಟ್ ಹಿಂದೆ ಬರೆದುಕೊಡ್ತಾನೆ. ಬಸ್ ಹತ್ತುವವರ - ಇಳಿಯುವವರ ಗಡಿಬಿಡೀಲಿ ನೀವು ಸುಸ್ತಾಗಿ ಬಸ್ ನಾವು ಇಳಿಯುವ ಜಾಗಕ್ಕೆ ಬಂದರೆ ಸಾಕು ಅನ್ನಿಸಿ ಬಸ್ ನಿಂತ ಕೂಡಲೇ ಇಳೀತೀವಿ. ಕಂಡಕ್ಟರ್ ಎಲ್ಲೋ ಜನಗಳ ಮಧ್ಯೆ ಒಳಗಿರುತ್ತಾನೆ. 'ರೈಟ್' ಅಂದ ಕೂಡಲೇ ಬಸ್ ಹೋಗೇ ಬಿಡುತ್ತೆ ''ನಮ್ಮ ಚಿಲ್ಲರೆ ಗತಿ ದೇವರೇ ಗತಿ, ಮಾರನೆದಿನ ಕಂಡಕ್ಟರ್‌ನ ಕೇಳಿದ್ರೆ''ನಮ್ಮ ಹೆಡ್ ಆಫೀಸಿಗೆ ಹೋಗಿ ಟಿಕೆಟ್ ಕೊಡಿ ದುಡ್ಡು ಕೊಡ್ತಾರೆ'' ಅಂತಾನೆ. ''ಏನಯ್ಯ ಈ ಚಿಲ್ಲರೆ ಹಣಕ್ಕೆ ನಿಮ್ಮ ಹೆಡ್ ಆಫೀಸಿಗೆ ಹೋಗ್ಬೇಕೇ?'' ಅಂದರೆ ''ಅಂಥವರು ಚಿಲ್ಲರೆ ತನ್ನಿಸ್ವಾಮಿ!'' ಅಂತ ತುಟಿ ಅಂಚಿನಲ್ಲಿ ನಗ್ತಾನೆ.

ಈ ಬೋಡು ಹೊಡೆಸಿಕೊಂಡ ಮೇಲೆ ಕಂಡಕ್ಟರ್ ನನ್ನ ಮುಖನೋಡಿ ''ಟಿಕೆಟ್ ಜೊತೆಗೆ ಸರಿಯಾದ ಚಿಲ್ಲರೆ ಕೊಟ್ಟು'' ಅಣ್ಣಾವ್ರೇ ಸರಿಯಾಗಿದೆಯಾ ನೋಡಿಕೊಳ್ಳಿ!'' ಅಂತಾನೆ. ಇದೇನು ವಿಚಿತ್ರ ಅಂಥ ಬೋಡು ತಲೆ ನೇವರಿಸಿಕೊಳ್ತೇನೆ. ಒಂದು ವೇಳೆ ನನ್ನ ದಾದಾ ಅಂತ ತಿಳಿದುಕೊಂಡನೋ ಏನೋ.

ಒಂದು ಮದುವೆಗೆ ತುಮಕೂರಿಗೆ ಹೋಗಿದ್ದೆ. ಅಂದು ಭಾನುವಾರ, ಬೆಳಿಗ್ಗೆ ಮುಹೂರ್ತ ಆದಮೇಲೆ ಮಧ್ಯಾಹ ರಿಸೆಪ್‌ಷನ್ ನಂತರ ಊಟ ಮದುವೆಗೆ ಬಂದಿದ್ದ ಬಂಧುಗಳ ಜೊತೆ ಸ್ವಲ್ಪ ಹರಟೆ ಎಲ್ಲಾ ಕಾರ್ಯಕ್ರಮ ಮುಗಿಸಿಕೊಂಡು ಬಸ್‌ಸ್ಟಾಂಡಿಗೆ ಬಂದಾಗ ಸಂಜೆ 5ಘಂಟೆ. ಒಂದು ತಡೆರಹಿತ ಬಸ್ ಇಲ್ಲ. ಶಿವಮೊಗ್ಗ, ಗುಲ್ಬರ್ಗ, ಚಿಕ್ಕಮಗಳೂರು, ಚಿತ್ರದುರ್ಗ ಮೊದಲಾದ ಕಡೆಯಿಂದ ಬಸ್‌ಗಳು ಬಂದು ನಿಂತಕೂಡಲೇ ಜಾತ್ರೆಜನ ಒಳಗೆ ನುಗ್ಗಲು ಹೋರಾಟ ನಡೆಸುತ್ತಿದ್ದರು. ನಾನು ತಡೆರಹಿತ ಬಸ್ಸಿಗಾಗಿ ಕಾಯುತ್ತಿದ್ದೆ. ಮೊದಲೇ ಕೌಂಟರ್‌ನಲ್ಲಿ ಟಿಕೇಟು ಕೊಡಲಿಲ್ಲ. ಕೌಂಟರ್ ಮುಚ್ಚಿತ್ತು. ತಡೆರಹಿತ ಬಸ್ ಬಂದಾಗ, ಮತ್ತೆ ಒಂದು ಜಾತ್ರೆ ಜನರ ನೂಕು ನುಗ್ಗಲಾಟ. ಹೇಗೋ ಬಸ್ ಒಳಗೆ ಸೇರಿಕೊಂಡೆ. ಇಬ್ಬರು ಪಡ್ಡೆ ಹುಡುಗರು ಆರು ಸೀಟುಗಳ ಮೇಲೆ ತಮ್ಮ ಟವಲು ಹಾಕಿ ಯಾರಿಗೂ ಜಾಗ ಬಿಡದೆ ಕಾವಲು ಕಾಯುತ್ತಿದ್ದರು. ಅವರ ಸ್ನೇಹಿತರು ಬಸ್ಸಿನ ಹೊರಗಡೆ ನಿಂತಿದ್ದರು. ಪಾಪ ಬೇಸಿಗೆ ಬಿಸಿಲಿನಲ್ಲಿ ಆ ತಳ್ಳಾಟದಲ್ಲಿ ಕೆಲವು ಹೆಂಗಸರು ರಟ್ಟೆಕೂಸನ್ನು ಕಂಕಳಿನಲ್ಲಿಟ್ಟುಕೊಂಡು ನಿಂತಿದ್ದರು ಅವರು ಬೇಡಿಕೊಂಡರೂ ಹುಡುಗರು ಜಾಗ ಬಿಡದೆ ದಬಾಯಿಸುತ್ತಿದ್ದರು. ನನಗೇಕೋ ಕೋಪ ನೆತ್ತಿಗೇರಿತು. ಹೋಗಿ, ಟವಲುಗಳನ್ನು ತೆಗೆದು ಅವರ ಕಡೆ ಎಸೆದು ಮಕ್ಕಳು ಮತ್ತು ಕೈಗೂಸು ಹೊಂದಿದ್ದ ಹೆಂಗಸರಿಗೆ ಕುಳಿತುಕೊಳ್ಳಲು ಜಾಗ ಮಾಡಿ ಕೊಟ್ಟೆ. ಆ ಇಬ್ಬರು ನನ್ನ ಮೇಲೆ ಹಾಯ್ದರು. ''ಈ ಸೀಟುಗಳು ನಾವು ರಿಸರ್ವ್ ಮಾಡಿದ್ದೇವೆ ನೀವು ಹ್ಯಾಗೆ ಕುಳಿತುಕೊಳ್ತೀರಿ?'' ಎಂದು ದಬಾಯಿಸಿದರು. ''ನೀವೇನು ಕೆ.ಎಸ್.ಆರ್.ಟಿ.ಸಿ ಡ್ರೈವರೋ ಕಂಡಕ್ಟರೋ, ಸೀಟು ರಿಸರ್ವ್ ಮಾಡೋಕೆ ನೀನ್ಯಾರಯ್ಯಾ ನಾವು ನಿನ್ನ ಹಾಗೆ ದುಡ್ಡು ಕೊಡ್ತೀವಿ - ನಿನ್ನದೇನು ಸ್ಪೆಷಾಲಿಟಿ?'' ಅಂತ ರೇಗಿದೆ. ಅವರು ನನ್ನನ್ನ ದುರುಗುಟ್ಟಿ ನೋಡಿದಾಗ, ತೋಳಮೇಲಿನ ಷರಟು ಮಡಸಿ ''ಏನು ದುರುಗುಟ್ಟು ನೋಡ್ತೀಯಾ?'' ಎಂದು ಘರ್ಜಿಸಿದೆ.

ಅಷ್ಟು ಹೊತ್ತಿಗೆ ಅವರ ಗೆಳೆಯರು ಒಳಗೆ ಬಂದರು. ನಮ್ಮ ಸಂಭಾಷಣೆ ಕೇಳಿಸಿಕೊಂಡರು. ಆಮೇಲೆ ಈ ಇಬ್ಬರು ಉಢಾಳರಿಗೆ ''ಹೋಗ್ಲಿ ಬಿಡ್ರೋ ಫೈಟರ್ ಶೆಟ್ಟಿ ಇದ್ದ ಹಾಗಿದ್ದಾನೆ ಗುದ್ದಿಹಾಕಿ ಹಲ್ಲು ಉದುರಿಸಿಬಿಟ್ಟಾನು'' ಅಂತ ಒಬ್ಬ ಹೇಳಿದ್ರೆ. ಇನ್ನೊಬ್ಬ ''ಅವನ ಬೋಡುತಲೆ ನೋಡೋ ಹ್ಯಾಗೆ ಮಿಂಚುತ್ತೆ ತಲೇಲಿ ಗುದ್ದಿ ನಿನ್ನ ಮೂಗು ಅಪ್ಪಚ್ಚಿ ಮಾಡ್ಬಿಟ್ಟಾನು ಸುಮ್ನೆ ಇರು'' ಅಂತ ಸಮಾಧಾನ ಮಾಡಿಕೊಂಡಿದ್ದಲ್ಲದೆ , ಅವರ ಕಡೆಯ ಇನ್ನೊಬ್ಬ ಆಗಲೇ ಬೇರೊಂದು ಸೀಟಿನಲ್ಲಿ ಕುಳಿತಿದ್ದವನು ತಾನು ಎದ್ದು ನನಗೆ ಜಾಗ ಮಾಡಿ ಕೊಡುತ್ತಾ ''ಹುಡುಗ ಬುದ್ಧಿ ಅವನ ಮಾತಿಗೆ ಯಾಕೆ ಕೋಪ ಕೋಪ ಮಾಡ್ಕೋತೀರಿ. ನೀವು ಕೂತ್ಕೊಳ್ಳಿ'' ಎಂದು ನನ್ನನ್ನ ಬಲವಂತವಾಗಿ ಕೂರಿಸಿದ.

''ಯಾಕೋ ನಿನ್ನ ಜಾಗ ಬಿಟ್ಟೇ!''ಎಂದು ಒಬ್ಬ ಗದರಿದ.

''ನನ್ನ ಪ್ಲಾನ್ ನಿನಗೆ ಗೊತ್ತಾಗ್ಲಿಲ್ಲ ಬಿಡು. ಅವನು ನಿಂತಿದ್ದರೆ ಇವನ ಎದೆಗೆ ಒದ್ದು ರಕ್ತಕಕ್ಕಿಸಬಹುದು. ಕೂರಿಸಿಬಿಟ್ರೆ ಹ್ಯಾಗಯ್ಯ ಹೊಡೀತಾನೆ? ಹ್ಯಾಗಿದೆ ನನ್ನ ಪ್ಲಾನು?'' ಅಂದ. ನಾನು ಬೋಡುಡಲೆ ಸವರಿಕೊಂಡು ಒಳಗೇ ನಗುತ್ತಾ ಸುಮ್ಮನಾದೆ.

ರಾಜಣ್ಣಾವ್ರ ಶಬ್ಧವೇಧಿ ಚಿತ್ರ ನೋಡ್ಕೊಂಡು ರಾತ್ರಿ ಬರ್ತಾ ಇದ್ದೆ ಕೆಂಪೇಗೌಡ ರಸ್ತೆಯಿಂದ ಗಾಂಧೀನಗರಕ್ಕೆ ತಿರುಗುವ ಸಾಗರ್ ಟಾಕೀಸು ಪಕ್ಕದ ರಸ್ತೆಯಲ್ಲಿ ಯಾರೋ ಗಂಡ ಹೆಂಡತಿ ಹೊಸದಾಗಿ ಮದುವೆ ಆಗಿರಬೇಕು ಯಾಕೆಂದರೆ ಆ ಹೆಣ್ಣು ಮೈತುಂಬ ಬೆಲೆ ಬಾಳುವ ಚಿನ್ನದ ವಡವೆಗಳನ್ನು ಹಾಕಿಕೊಂಡಿದ್ದಳು ಈ ದಂಪತಿಗಳನ್ನು ನಾಲ್ಕು ಜನ ದಾಂಢಿಗರು ಸುತ್ತುವರಿದು ಹೆದರಿಸುತ್ತಿದ್ದರು. ಒಬ್ಬನ ಕೈಯಲ್ಲಿ ಚಾಕು ಇದ್ದಿರಬೇಕು. ಗಂಡ ಹೆಂಡತಿಗೆ ವಡವೆಗಳನ್ನು ಬಿಚ್ಚಿ ಕೊಡಲು ಹೇಳುತ್ತಿದ್ದ ಅವಳು 'ಒಲ್ಲೆ' ಅನ್ನುತ್ತಿದ್ದಳು. ಅವರು ಅವಸರ ಮಾಡುತ್ತಿದ್ದರು. ರಾಜಕುಮಾರ್ ಚಿತ್ರ ನೋಡಿದ ಶೂರತ್ವವೋ ಏನೋ ಏಕಾಏಕಿ ಅವರ ಕಡೆ ''ಯಾವೊನ್ಲೇ ಅವನು!'' ಅಂತ ನುಗ್ಗಿದೆ. ಅವರು ಬೀದಿದೀಪದ ಬೆಳಕಿನಲ್ಲಿ ನನ್ನನ್ನ ನೋಡಿದರು. ಸ್ವಲ್ಪಹೊತ್ತು ವಿಚಲಿತರಾಗಿ ನಿಂತರು. ಅದರಲ್ಲಿ ಒಬ್ಬ ''ಲೋ ಅವನು ಮಾಫಿಯಾ ಮಸ್ತಾನ್ ಅಲ್ಲವೇನೊ?!'' ಅಂದ ''ಮಾಫಿಯಾ ಮಸ್ತಾನ್ ಬಂದ ಓಡ್ರೋ!'' ಅಂತ ಎಲ್ಲರೂ ಓಟ ಕಿತ್ತರು. ನಾನು ಆ ದಂಪತಿಗಳ ಬಳಿ ಹೋಗಿ ''ನೀವೇನು ಹೆದರ್ಕೊಬೇಡಿ ಈ ಕತ್ತಲೆ ರಸ್ತೆಗೆ ಯಾಕೆ ಬಂದ್ರಿ? ಮೈನ್ ರಸ್ತೇಲಿ ಹೋಗಬಾರ್ದ?'' ಅಂದೆ

ಅವರು ನನ್ನನ್ನ ಗಾಬರಿಯಿಂದ ನೋಡುತ್ತಾ ''ಮಾಫಿಯಾ ಮಸ್ತಾನಣ್ಣಾ - ನಮ್ಮ ತಂಟೆಗೆ ಬರ್ಬೇಡಿ ಸಾವಿರ ನಮಸ್ಕಾರ'' ಅಂತ ಹೇಳಿ ಸ್ಕೂಟರ್ ತಿರುಗಿಸಿ ಮೈನ್‌ರೋಡಿನ ಕಡೆ ಸ್ಪೀಡಾಗಿ ಹೋದರು. ನನಗೆ ಅರ್ಥವಾಗದೆ ತಲೆ ಸವರಿಕೊಂಡೆ, 'ಬೋಡುತಲೆ!' ಅಷ್ಟು ಹೊತ್ತಿಗೆ ಒಂದು ಪೋಲೀಸ್ ಜೀಪ್ ನನ್ನ ಹತ್ತಿರ ಬಂದು ನಿಂತಿತು, ಪೋಲೀಸಿನವ ನನ್ನ ಕಡೆ ಕೆಕ್ಕರಿಸಿ ನೋಡುತ್ತಾ ''ಈ ಕಡೆ ಮಸ್ತಾನನ್ನ ನೋಡಿದ್ಯಾ ರೌಡಿ ತರಹ ಇದ್ದಾನೆ'' ಈ ಕಡೆ ಒಬ್ಬ ಓಡಿಹೋದ!'' ಅಂತ ವಿರುದ್ಧ ದಿಕ್ಕಿನಲ್ಲಿ ಕೈ ತೋರಿಸಿದೆ ಜೀಪು ಆ ಕಡೆ ಓಡಿತು, ಬದುಕಿದೆಯಾ ಬಡಜೀವವೇ ಅಂದುಕೊಂಡೆ.

ಆ ದಿನ ವೈಕುಂಠ ಏಕಾದಶಿ. ಬೆಳಿಗ್ಗೆ ಎದ್ದು ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ, ಮಂತ್ರಾಲಯದಲ್ಲಿ ಸರ್ವಪೂಜಾ, ಕನಕಾಭಿಷೇಕ ಪೂಜೆ ಮಾಡಿಸಿದ್ದಕ್ಕೆ ಖಾವಿ ಬಣ್ಣದ ರೇಷ್ಮೆ ವಸ್ತ್ರ ಕೊಟ್ಟಿದ್ದರು. ಮಡಿಯುಟ್ಟು ಅದನ್ನು

ಹೊದ್ದುಕೊಂಡು ದೇವಾಲಯಕ್ಕೆ ಹೋಗಿ ದೇವರ ದರ್ಶನ ಮಾಡಿ ಹೊರಗೆ ಅರಳಿಕಟ್ಟೇ ಮೇಲೆ ಕುಳಿತು, ಕಣ್ಮುಚ್ಚಿ ವಿಷ್ಣುಸಹಸ್ರನಾಮ ಜಪಿಸುತ್ತಿದ್ದೆ. ನೂರು ನಾಮಗಳಿಗೊಮ್ಮೆ 'ಸಚ್ಚಿದಾನಂದ' ಅಂತ ಜೋರಾಗಿ ಹೇಳಿಕೊಳ್ಳುತ್ತಿದ್ದೆ. ಸಹಸ್ರನಾಮ ಜಪಮಾಡಿ ಕಣ್ಣ್ ತೆರೆದಾಗ ನೋಡ್ತೀನಿ ನನ್ನ ಮುಂದೆ ಎಲೆ ಅಡಿಕೆ ಹಣ್ಣುಗಳು, ತೆಂಗಿನಕಾಯಿ ಹೋಳುಗಳು ದೊನ್ನೆಗಳಲ್ಲಿ ಪೊಂಗಲ್ - ಪುಳಿಯೋಗರೆ, ಹತ್ತು-ನೂರರ ನೋಟುಗಳು.

ನನಗೆ ಆಶ್ಚರ್ಯದ ಜೊತೆಗೆ ಅನುಮಾನ ಬಂತು ಸುತ್ತಲೂ ನೋಡಿದೆ. ನಾನು ಕುಳಿತಿದ್ದ ಜಾಗದ ಹಿಂದೆ ಒಂದು ಬೋರ್ಡು ಇತ್ತು. ''ಸಚ್ಚಿದಾನಂದ ಸ್ವಾಮೀಜಿಗಳ ಸನ್ನಿಧಾನ'' ನಾನು ಇಲ್ಲಿ ಕುಳಿತುಕೊಳ್ಳುವ ಮೊದಲು ಸರಿಯಾಗಿ ಗಮನಿಸಿರಲಿಲ್ಲ.

ಜನ ನನ್ನನ್ನೇ 'ಸಚ್ಚಿದಾನಂದ ಸ್ವಾಮೀಜಿ' ಅಂತ ತಿಳಿದು ಕಾಣಿಕೆಗಳನ್ನು ಅರ್ಪಿಸಿ, ನಮಸ್ಕಾರ ಮಾಡಿ ಹೋಗಿದ್ದರು.

ಇದಾಗಿ ಒಂದೆರಡು ತಿಂಗಳ ನಂತರ, ಮಂತ್ರಾಲಯಕ್ಕೆ ರಾಯರ ದರ್ಶನಕ್ಕೆಂದು ಹೋಗಿದ್ದೆ. ನದಿಸ್ನಾನ ಮಾಡಿ, ಒಂದು ಬಂಡೆ ಮೇಲೆ ನಿಂತು ಮಡಿಕಚ್ಚೆಪಂಚೆ, ಮೇಲುವಸ್ತ್ರಾ ಅದೇ ಕಾವಿ ವಸ್ತ್ರ ಹೊದ್ದುಕೊಂಡು ಒಂಟಿಕಾಲಿನ ಮೇಲೆ ನಿಂತು ಸೂರ್ಯ ನಮಸ್ಕಾರ ಮಾಡ್ತಿದ್ದೆ. ಯಾರೋ ಇಬ್ಬರು 'ಸ್ವಾಮೀಜಿ' ಅಂತ ಓಡಿಬಂದು ನನ್ನ ಕಾಲಿಗೆ ಬಿದ್ದು ನಮಸ್ಕಾರ ಮಾಡಿದರು. ''ನಾನು ಯಾಕಪ್ಪಾ ಇದೇನು ಮಾಡ್ತಿದ್ದೀರಿ?'' ಅಂದೆ, ನೀವು ಬೆಂಗಳೂರಿನಲ್ಲಿ ಗುಡಿಕಟ್ಟೇ ಮೇಲೆ ತಪಸ್ಸು ಮಾಡ್ತಿದ್ದಾಗ ನಿಮ್ಮ ಕಾಲಿಗೆ ಬಿದ್ದು ಬೇಡಿಕೊಂಡಿದ್ದೆವು. ಅದು ನಡೆದು ಹೋಯಿತು. ನಮ್ಮ ಹಡಗು ವ್ಯಾಪಾರದಲ್ಲಿ ಹತ್ತುಕೋಟಿ ಲಾಭ ಬಂತು ನಿಮ್ಮನ್ನು ಹುಡುಕಿಕೊಂಡು ಬೆಂಗಳೂರಿಗೆ ಹೋದೆವು ನೀವು ಕಾಣಲಿಲ್ಲ, ಇಲ್ಲಿ ಅಕಸ್ಮಾತ್ತಾಗಿ ನೋಡಿದೆವು. ನಮ್ಮನ್ನ ಆಶೀರ್ವಾದ ಮಾಡಿ.'' ಎಂದು ತಮ್ಮ ಕತೆ ಹೇಳಿಕೊಂಡರು. ನಾನು ವಿನಮ್ರನಾಗಿ ''ಇದರಲ್ಲಿ ನನ್ನದೇನಿಲ್ಲ - ಎಲ್ಲಾ ದೇವರ ಇಚ್ಚೆ'' ಅಂದೆ.

''ಆಹಾ ಎಂಥಾ ದೊಡ್ಡಗುಣ. ಸ್ವಾಮೀಜಿಗಳೆಂದರೆ ನೀವೇ ನಿಜವಾದ ಸ್ವಾಮೀಜಿ''-ಎಂದು ಕೆನ್ನೆಗೆ ಹೊಡೆದುಕೊಂಡರು.

''ನೀವು ಎಲ್ಲಿ ಇಳ್ಕೊಂಡಿದ್ದಿರಿ-ನಮ್ಮ ಸೇವೆ ಸ್ವೀಕರಿಸಿ'' ಎಂದು ಬೇಡಿದರು

''ಗುರುಗಳಿಗೆ ಗುರು ಮಂತ್ರಾಲಯ ಪ್ರಭು ಅಲ್ಲಿದ್ದಾರೆ, ಅವರ ಮೊರೆ ಹೋಗಿ. ನೀವು ಏನು ಕೊಡುವುದಿದ್ದರೂ ಅವರಿಗೆ ಕೊಡಿ'' ನನ್ನನ್ನ ನನ್ನಷ್ಟಕ್ಕೆ ಬಿಟ್ಟು - ಬಿಡಿ'' ಅಂದೆ.

''ಸರ್ವಪರಿತ್ಯಾಗಿಗಳು ಅಂದರೆ ಹೀಗಿರಬೇಕು!'' ಎಂದು ಅವರಿಬ್ಬರು ಮಾತನಾಡಿಕೊಂಡರು.


''ನೀವು ಹೇಳಿದಂತೆಯೇ ಆಗಲಿ, ಆದರೆ ನಮ್ಮ ಮನಸ್ಸಿನ ಸಮಾಧಾನಕ್ಕೆ ನೀವು ಇದನ್ನು ತೆಗೆದುಕೊಳ್ಳಲೇ ಬೇಕು'' ಎಂದು ಹೇಳಿ ನನ್ನ ಕೈಯಲ್ಲಿ ಒಂದು ಪ್ಯಾಕೆಟ್ ಇಟ್ಟು ಕೈ ಮುಗಿದು ಹೊರಟುಹೋದರು.

''ಗುರು ರಾಘವೇಂದ್ರ ಏನಪ್ಪಾ ನಿನ್ನ ಮಹಿಮೆ?!'' ಎನ್ನುತ್ತಾ ಪಾಕೆಟ್ ತೆಗೆದು ನೋಡಿದೆ, ನೋಟಿನ ಕಂತೆಗಳು

ನನ್ನ ಬೋಡಾಯಣ ಕೇಳಿ ಬೋರಾಯಿತೆ? ಸರಿ ಬಿಡಿ ಇಲ್ಲಿಗೆ ನಿಲ್ಲಿಸಿಕೊಳ್ತೀನಿ. ಆದರೆ ಒಂದು ನೆನಪಿನಲ್ಲಿಟ್ಟುಕೊಳ್ಳಿ, ತಲೆಬೋಡು ಮಾಡಿಸಿಕೊಳ್ಳುವುದರಿಂದ ಕೆಲವು ಅನುಕೂಲತೆಗಳೂ ಇವೆ. ಇನ್ನೊಂದ್ಮೂರು ತಿಂಗಳಿಗೆ ತಲೆಕೂದಲು ಬೆಳೆಯುತ್ತೆ. ನಾನು ಮಾಮೂಲಿತರ ಆಗ್ತೀನಿ.

ಆಗ ಯಾವ ಕಂಡಕ್ಟರು ಚಿಲ್ಲರೆ ಕೊಡೋಲ್ಲ, ಯಾವ ವ್ಯಾಪಾರಿಯೂ 'ಸ್ವಾಮೀಜಿ' ಅಂತ ಕಾಲಿಗೆ ಬೀಳೊಲ್ಲ.

ಜಗನ್ನಿಯಾಮಕ ಜಗದ್ದೋದಾರನ ಲೀಲೆಗಳಲ್ಲಿ ಬೋಡಾಯಣನೂ ಬಂದಿರಬಹುದೆ?!



''ಕಳೆದ ತಿಂಗಳು ಐದು ಹಾರ್ಟ್ ಸರ್ಜರಿ ಬೇಕೇ ಬೇಕು ಅಂತ ಹಠಹಿಡ್ದೆ. ಷಾರ್ಜಾಗೆ ಹೋಗೋದಿದೆಯಲ್ಲಾ''

ಕನ್ನಡ ಲಿಪಿ

– ಎಂ.ಎನ್‌.ಕೆ

ಹಾಸಿಗೆಯಲ್ಲಿ ಬಿದ್ದುಕೊಂಡೇ ರತ್ನರ "ಭ್ರಮರ" ತಿರುವಿ ಹಾಕುತ್ತಿದ್ದೆ. ರತ್ನರು 70ರ ಸುಮಾರಲ್ಲಿ ದೆಹಲಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ವಿಷಯ ಬರೆದಿದ್ದರು. ಅಲ್ಲಿನ ಪುಸ್ತಕ ವಿಭಾಗದಲ್ಲಿ ಒಬ್ಬ ದೆಹಲಿಯ ತರುಣ ಒಂದು ಕನ್ನಡ ಪುಸ್ತಕವನ್ನು ಕೊಂಡಾಗ ರತ್ನರು ಅವನನ್ನು "ನಿನಗೆ ಕನ್ನಡ ಓದಲು ಬರುವುದಿಲ್ಲ. ಈ ಪುಸ್ತಕದಿಂದ ನಿನಗೇನು ಪ್ರಯೋಜನ" ಎಂದು ಕೇಳಿದಾಗ ಆ ತರುಣ ಅಂದನಂತೆ "This is for my Library. These letters look like flowers"

ಇದನ್ನು ಓದಿ ನನ್ನ ಮನಸ್ಸು ಉಬ್ಬಿ ಬಂತು. "ಅಮ್ಮಾ ಕನ್ನಡ ಮಾತೆ, ನಿನ್ನ ಮಕ್ಕಳಿಗೇ ಇಲ್ಲದ ಅಭಿಮಾನ ನಿನ್ನ ತನುಜಾತೆಯ ಮಕ್ಕಳಿಗಾದರೂ ಇದೆಯಲ್ಲಾ, ಅಷ್ಟೇ ಸಾಕು ಅನ್ನಿಸಿತು ಮನ.

ಇದೇ ವಷಯದಲ್ಲಿ ನಾನು ಗೆದ್ದ ಒಂದು Argumentಊ ಜ್ಞಾಪಕಕ್ಕೆ ಬಂತು.

56ರಲ್ಲಿ ನಾನು BE ಪಾಸ್ ಮಾಡಿ ಹತ್ತಿರದಲ್ಲೆಲ್ಲೂ ಕೆಲಸ ಸಿಗದೆ ದೂರದ ಕೊಯ್ನಾ ಪ್ರಾಜೆಕ್ಟ್‌ಗೆ ಹೋಗಿ ಕೆಲಸಕ್ಕೆ ಸೇರಿದೆ. ಅಲ್ಲಿ ನನಗೂ ಮತ್ತು ಮದ್ರಾಸಿನಿಂದ ಬಂದ ಶ್ರೀ ರಾಮನ್‌ಗೂ ಒಂದು "Bachelors quarters" ಕೊಟ್ಟಿದ್ದರು. ನನಗೆ ಅಲ್ಲಿ ಸದಾ ರಾತ್ರಿ ಪಾಳಿ, ರಾತ್ರಿ 8ರ ರಿಂದ ಬೆಳಿಗ್ಗೆ 8ರವರೆಗೆ, ರಾಮನ್‌ಗೆ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಆಫೀಸ್ ಕೆಲಸ, ನನಗೆ ಟನಲ್ ಒಳಗೆ ಚಾಕರಿ, ರಾಮನ್‌ಗೆ ಆಫೀಸಿನ ಪಾನ್ ಕೆಳಗೆ

ನಾವಿಬ್ಬರೂ ಒಟ್ಟಿಗೆ ಇರುತ್ತಿದ್ದುದು ಬೆಳಿಗ್ಗೆ ಮತ್ತು ರಾತ್ರಿ ಒಂದು ಘಂಟೆ ಮಾತ್ರ. ಅಷ್ಟರಲ್ಲೇ ಸಾಕಷ್ಟು ಕಾದಾಟ ನಡೆಯುತ್ತಿತ್ತು. ರಾಮನ್ ಶಿಸ್ತಿನ ಸಿಪಾಯಿ. ತನ್ನ ಎಲ್ಲಾ ಕೆಲಸದಲ್ಲಿ ತುಂಬಾ ಅಚ್ಚುಕಟ್ಟು. ನಾನು ಬೆಳಿಗ್ಗೆ ಕೆಲಸದಿಂದ ಬರುವಷ್ಟರಲ್ಲಿ ರಾಮನ್ ತನ್ನ ಸ್ನಾನ ಮುಗಿಸಿ, ನಾಮ ಧರಿಸಿ, ದೇವರಪೂಜೆ ಮುಗಿಸಿ ಉಪಹಾರಕ್ಕೆ ಸಿದ್ಧನಾಗುತ್ತಿದ್ದ.

ನಾನು ಇದಕ್ಕೆ ತದ್ವಿರುದ್ಧ. ನಾನು ಬೆಳಿಗ್ಗೆ ಕೆಲಸದಿಂದ ಬಂದು ಮುಖವನ್ನೂ ತೊಳೆಯದೆ ಟೀ ಕುಡಿಯುವುದನ್ನು ಅವನಿಂದ ಸಹಿಸಲಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ''ನೀನೇಕೆ ನಿನ್ನ ಹಾಸಿಗೆ, ಚಾಪೆ ಸುತ್ತಿಟ್ಟಿಲ್ಲ, ಶೇವ್ ಮಾಡಿದ ಮೇಲೆ ಬ್ರಶ್ ತೊಳೆಯಬೇಡವೇ, ನಿನ್ನ ಉಗುರು ಮನೆಯೊಳಗೆ ಕಟ್ ಮಾಡಬೇಡಾಂತ ಇನ್ನೆಷ್ಟು ಸಲ ಹೇಳಬೇಕೋ ಆ ದೇವರೇ ಬಲ್ಲ. ನಿನ್ನ ಟನಲ್ ಕೊಳೆ ಮನೆಯೊಳಗೆ ತರಬೇಡ. ಆ ಬಟ್ಟೇ ಬರೆ ವರಾಂಡದಲ್ಲೇ ಇಡು''.. ಇತ್ಯಾದಿ ಇತ್ಯಾದಿ.

ಇವೆಲ್ಲಾ ಬರೀ ಜುಜುಬಿ ಗಲಾಟೆಗಳು, ನಮ್ಮ ನಿಜವಾದ ಘರ್ಷಣೆ ನಮ್ಮ ಭಾಷೆಗೆ ಸಂಬಂಧ ಪಟ್ಟಿದ್ದು. ಅರ್ಥಾತ್ ಕನ್ನಡ VS ತಮಿಳ್ ಗಲಾಟೆ. ನನ್ನ ಪಟ್ಟು ನಾನು ಬಿಡೋನಲ್ಲ. ಈ ವಿಚಾರದಲ್ಲಿ ರಾಮನ್ ಪಟ್ಟು ಹನುಮಾನ್ ಪಟ್ಟಿಗಿಂತ ಬಿಗಿ. ಅನೇಕ ಬಾರಿ ಈ ವಾದ ತಾರಕಕ್ಕೇರಿ ಆಜೂಬಾಜಿನಲ್ಲಿದ್ದ ಬ್ರಹ್ಮಚಾರಿ ತ್ರಯ ಅಥವಳೆ, ಕರ್ಮರ್ಕರ್ ಮತ್ತು ವೈದ್ಯ ಬಂದು ನಮ್ಮ ಜಗಳ ಬಿಡಿಸಬೇಕಾಗುತ್ತಿತ್ತು.

ಒಂದು ದಿನ ಯಾವ ಕಾರಣಕ್ಕೋ ಗೊತ್ತಿಲ್ಲ, ನಮ್ಮಿಬ್ಬರಿಗೂ ಮಧ್ಯಾಹ್ನ ಬಿಡುವು. ಅವತ್ತಿನ ಜಗಳ ಲಿಪಿಗೆ ಸಂಬಂಧಪಟ್ಟಿದ್ದು. ನಾನು ನಮ್ಮ ಕನ್ನಡ ಲಿಪೀನೇ ಮುದ್ದಾದದ್ದು ಅಂದೆ. ರಾಮನ್ 'ನಮ್ ತಮಿಳ್ ಲಿಪಿ ಮುಂದೆ ನಿಮ್ಮದೂ ಒಂದು ಲಿಪೀನೇ' ಅಂದೇ ಬಿಟ್ಟ. ನನ್ನ ಮತ್ತು ಅವನ ಕೂಗಾಟ ತಾರಕಕ್ಕೇರಿತು. ಬಂದರು ತ್ರಿಮೂರ್ತಿಗಳು. ''ಏನ್ರಯ್ಯಾ ನಿಮ್ಮ ಗಲಾಟೆ, ರಜಾ ದಿನ ನಿದ್ದೆ ಮಾಡಕ್ಕೂ ಬಿಡಲ್ಲ ನೀವು'' ಅನ್ನುತ್ತಾ ಸರಿ, ಇವತ್ತೇನು ನಿಮ್ಮ ಗುನುಗು ಅಂದರು, ನಾನು ನನ್ನ ಪುರಾಣ ಬಿಚ್ಚಿದೆ. ಅವರು ಅಷ್ಟೇನಾ, ಸರಿ ಈಗ ನೀವಿಬ್ಬರೂ ಆ ಮೂಲೆಗಳಲ್ಲಿ ಹೋಗಿ ಕುಳಿತುಕೊಳ್ಳಿ, ಇಬ್ಬರೂ ನಿಮ್ಮ ಭಾಷೆಗಳಲ್ಲಿ ಏನಾದರೂ ಬರೆದುತನ್ನಿ. ನಾವು ಮೂವರೂ ಅದನ್ನು ನೋಡಿ ನಮ್ಮ judgement ಕೊಡ್ತೀವಿ, ಆಮೇಲೆ ನೀವಿಬ್ಬರೂ ಬಾಯಿಮುಚ್ಚಿಕೊಂಡಿರಬೇಕು'' ಅಂದರು. ತ್ರಿಮೂರ್ತಿಗಳಲ್ಲಿ ಅಥವಳೆ ಅಜಾನುಬಾಹು. nccಯಲ್ಲಿ commandent ಆಗಿದ್ದೋನು. ಅವನಿಗೆ ಪ್ರತಿ ಹೇಳಲು ಸಾಧಾರಣವಾಗಿ ಯಾರೂ ಪ್ರಯತ್ನಿಸುತ್ತಿರಲಿಲ್ಲ, ಗಾಳಿ ಸುದ್ದಿಯಂತೆ ಅವನ ಬಾಸ್ ಅವನಿಗೆ ಹೆದರುತ್ತಿದ್ದರಂತೆ!.

ನಾವಿಬ್ಬರೂ ನಮ್ಮ ಕಾಗದ ಮತ್ತು ಪೆನ್ ಹಿಡಿದು ಕುಳಿತೆವು. ನನ್ನ ಲಿಪಿ ಬ್ರಹ್ಮಲಿಪಿ. ರಾಮನ್ದು ಮುದ್ದಾದ ಕೈ ಬರಹ. "He who writes hell thinks

hell" ಅನ್ನೋದು ಅಕ್ಷರಶಃ ನಿಜ. ನಮ್ಮ ರಾಮನ್ ಮುಂದೆ ನನ್ನ ಬೇಳೆ ಬೇಯುವುದಿಲ್ಲಾ ಅನ್ನೋದು ನನಗೆ ಗೊತ್ತಿತ್ತು. ಅದಕ್ಕೇ ಒಂದು ಉಪಾಯ ಹೂಡಿದೆ, ''ನಾವಿಬ್ಬರೂ ಬರೆಯೋದು ಏನೂ ಬೇಡ. ಈ ಒಂದು ರೂಪಾಯಿ ನೋಟ್ ತೊಗೋಳಿ. ಇದರಲ್ಲಿ ಎಲ್ಲಾ ಭಾಷೆಗಳಲ್ಲೂ ''ಒಂದು ರೂಪಾಯಿ'' ಅಂತ ಬರೆದಿದೆ. ಅದರಲ್ಲಿ ಯಾವ ಲಿಪಿ ಚೆನ್ನಾಗಿದೆಯೋ ಅದನ್ನ ತೀರ್ಮಾನ ಮಾಡಿ'' ಅಂದೆ. ಅದು ಸಮಂಜಸವೆಂದರು ತ್ರಿಮೂರ್ತಿಗಳು. ಒಂದು ರೂಪಾಯಿನ ನೋಟ್ ಹಿಡಿದು ಒಂದು ಮೂಲೆಯಲ್ಲಿ ಸೇರಿ ತಮ್ಮ ಮೂರು ಮೂಗುಗಳನ್ನು ತಾಕಿಸುತ್ತ ಚರ್ಚೆ ಶುರು ಮಾಡಿದರು. ತಮ್ಮ ಮರಾಠೀ ಭಾಷೆಯಲ್ಲಿ ತುಂಬಾ ಹೊತ್ತು ಗುಸ-ಗುಸ ಪಿಸ-ಪಿಸ ಮಾತಾಡಿದರು. ಅವರ ಕೆಲಸದ ಶ್ರದ್ಧೆ, ಮತ್ತು seriousness ನಮ್ಮ ವಿಶ್ವಸುಂದರೀ ತೀರ್ಪುಗಾರರಿಗಾಗಲೀ, ಉಚ್ಚನ್ಯಾಯಾಲಯದ ನ್ಯಾಯಾಧೀಶರಿಗಾಗಲೀ ಮಾದರಿ ಆಗುವಂತಹುದು.

ಅವರು ತೀರ್ಪು ಕೊಟ್ಟಾಗ ನಾನು ''ಹುರ್ರೇ'' ಅಂತ ಕೂಗಿದೆ. ರಾಮನ್ ಗುರ್ ಗುರ್ ಅಂದ. ತ್ರಿಮೂರ್ತಿಗಳು ತಮಗೆ ಗೊತ್ತಿಲ್ಲದೇನೇ select ಮಾಡಿದ್ದು ನಮ್ಮ ಕಸ್ತೂರಿ ಕನ್ನಡ ಲಿಪಿ. ಇದಾದ ಮೂರು ದಿನ ನಾನು ನನ್ನ ಮೂಗನ್ನು ಆಕಾಶದಲ್ಲೇ ಇಟ್ಟು ನಡೆಯುತ್ತಿದ್ದೆ. ರಾಮನ್ ಅತೀವ ಸಂಕಟದಿಂದ ಆಗಾಗ್ಗೆ ಗುರ್ ಗುರ್ ಅಂತಿದ್ದ. ಹಾಗೇ ನೋಡಿದರೆ ನನ್ನ ಮತ್ತು ರಾಮನ್ ತಿಕ್ಕಾಟದಲ್ಲಿ ನಾನು ಗೆದ್ದಿದ್ದು ಒಂದೇ ಸಲ. ಅದೇ ಕಡೆಯ ಸಲ.

ತೀರ್ಪುಗಾರರು ಅಂದಿನ ಒಂದು ರೂಪಾಯಿಯ ನೋಟನ್ನು ನೋಡಲು ಒಪ್ಪಿದ್ದು ನನ್ನ ಅದೃಷ್ಟ. ಇಂದಿನ ನೋಟ್ಗಳಲ್ಲಿ ಕನ್ನಡ ಲಿಪಿ ಉರ್ದೂ ಲಿಪಿಯಾಗಿ ಕಾಣಿಸುತ್ತೆ.

ಇದಾದ ಸ್ವಲ್ಪ ದಿನಕ್ಕೇ ನನಗೆ ಬೆಂಗಳೂರಿನ ಏರ್‌ಕ್ರಾಫ್ಟ್ ಸಂಸ್ಥೆಯಲ್ಲಿ ಒಂದು ಚಿಕ್ಕ ಕೆಲಸ ಸಿಕ್ಕಿತು. ಸಂಬಳ ಕಡಿಮೆ, ಹೋಗಲೋ ಬೇಡವೋ ಅಂತ ತೊಳಲಾಟ. ಅಲ್ಲೇ ಇದ್ದ ಸ್ನೇಹಿತ ಗೋಪಾಲನ್ನ ಕೇಳಿದೆ: ''ನೋಡೋ ಸಂಬಳ ಕಡಿಮೆ, ಬೆಂಗಳೂರು ತುಂಬ ಈಗ Asian flu ಬೇರೆ ಇದೆಯಂತೆ'' ಅಂದೆ. ಅವನು ತನ್ನ ಗಟ್ಟಿಯಾದ ಧ್ವನಿಯಲ್ಲಿ ''ಲೋ.....ಬೇಕೂಫಾ, ತಕ್ಷಣ ಈ ಜಾಗ ಖಾಲೀ ಮಾಡು. ನಿನಗೆ ಅಲ್ಲಿ ಸಿಗೋ ಸಂಬಳ ನೀನು ಮಾಡೋ ಕೆಲಸಕ್ಕೆ ತುಂಬಾ

ಜಾಸ್ತೀ ಆಯಿತು. ನೀನು ಇಲ್ಲಿ ಇದ್ದಷ್ಟೂ ದಿನ ಆ ಟನಲ್ ಒಳಗೇ ಇದ್ದಿ. ಅಲ್ಲಿ ಬೇಕಾದಷ್ಟು ಜನರ ತಲೇ ಮೇಲೇ ಕಲ್ಲು ಬಿತ್ತು. ನಿನ್ನ ತಲೇ ಮೇಲೇ ಒಂದು ಕಲ್ಲೂ ಬೀಳಲಿಲ್ಲ. ನಿನಗೆ ಇಲ್ಲಿದ್ದ ಅಷ್ಟೂ ದಿನ ಒಂದು ನೆಗಡಿ ಜ್ವರ ಏನೂ ಬರಲಿಲ್ಲ. ನಿನ್ನದು ಗಟ್ಟಿ ಪಿಂಡ. Flu ನಿನ್ನ ಹತ್ತಿರ ಬರಲ್ಲ. ಸದ್ಯ ನೀನು ತೊಲಗಿದರೆ ನಾವೆಲ್ಲ ಹಾಯಾಗಿರಬಹುದು'' ಅಂದೇ ಬಿಡೋದೇ?.

ಅವನು ಹೇಳಿದ್ದು ನಿಜ. ನನಗೆ ಬೆಂಗಳೂರಲ್ಲಿ Flu ಬರಲೇ ಇಲ್ಲ. ಈಗಲೂ ಇಲ್ಲ. ಆದರೆ ನಾನು ಏರ್‌ಕ್ರಾಫ್ಟ್ ಫ್ಯಾಕ್ಟರೀಲಿ ಇದ್ದಷ್ಟೂ ದಿನ ನನ್ನ ಕನ್ನಡ ಭಾಷೆ ವಿಚಾರ ಬಾಯೇ ಬಿಡಲಿಲ್ಲ, ಕಾರಣ ನಿಮಗೇ ಗೊತ್ತು. ನಾನ್ಯಾಕೆ ಹೇಳ್ಳೀ.

ಕೊಯ್ನಾದಲ್ಲಿ ಫ್ರೀ ಆಗಿ ಮಾತಾಡೋ ಹಾಗೆ ಬೆಂಗಳೂರಲ್ಲಿ ಮಾತಾಡಕ್ಕಾಗುತ್ತಾ ಹೇಳೀ ನೋಃಡೋಣ.



ಎಲೆಮರೆಯ ಕನ್ನಡಿಗರು

– ಟೀಯೆಸ್ಸಾರ್ರಾವ್

(ಕಾಷ್ಟಚೂರ್ಣ ದಂಪತಿಗಳು)

ಕೊಂಚವೂ ಕನ್ನಡಿಗನ ಕಳೆಯಿಲ್ಲದೆ, ತಮ್ಮ ಚಾಳೀಶ, ಗಿರಿಜಾಮೀಶೆ, ಹಾಗೂ ವಿಭೂತಿ ಕಂಬಿಗಳ ಹಿಂಬದಿಯಲ್ಲಿಯೇ ಕನ್ನಡ ತಾಯಿ ಸೇವೆಯನ್ನು ಎಡೆಬಿಡದೆ ಎಸಗುತ್ತಿರುವವರಲ್ಲಿ ಶ್ರೀಮಾನ್ ಕಾಷ್ಟಚೂರ್ಣರು ಮುಖದ ಮೇಲಿನ ಮಡವೆಯಂತೆ ಪ್ರಾಮುಖ್ಯರಾದವರು. ಶ್ರೀಮತಿ ನೀಲಾಂಬರಿಯವರು ಎಂದು ಕಾಷ್ಟಚೂರ್ಣರ ಕೈಹಿಡಿದು ಯಮನನ್ನು ಹಿಂಬಾಲಿಸಿದ ಸಾವಿತ್ರಿಯಂತೆ ಕನ್ನಡಮ್ಮನ ಸೇವೆಗೆ ಆರಂಭಿಸಿದರೋ ಅಂದಿನಿಂದ ಈ ಜೋಡಿ 'ಕಾಷ್ಟಚೂರ್ಣ ದಂಪತಿ'ಗಳೆಂದು ಹೆಸರಾಂತಿತು.

ಮಹಾಕವಿ ಮುದ್ದಣ್ಣ ಮನೋರಮೆಯರಂತೆ ಅನೇಕವೇಳೆ ಕಾಷ್ಟಚೂರ್ಣ ದಂಪತಿಗಳಲ್ಲೂ 'ಕನ್ನಡ-ಸಕ್ಕದ' ತಿಕ್ಕಾಟವಾಗಿ ಹಗಲಿರುಳೂ ವಾದಿಸಿ ಕಚ್ಚಾಡಿ ಇಬ್ಬರೂ ಹೊಟ್ಟೆಮೇಲೆ ಒದ್ದೆಬಟ್ಟೆ ಹಾಕಿಕೊಂಡು ಮಲಗಿರುವುದುಂಟು. ಮುತ್ತಂ ಮೆಳಸಂಕೋದಂತಿರೆ, ಕರ್ಮಣಿಸರದೋಳ್ ಚೆಂಬವಳಂಕೋದಂತಿರೆ, ರಸಮೊಸರೆ... ರನ್ನ ಮಣಿಯಂ ಪೊನ್ನಿಂ ಬಿಗಿದಂತೆಸಗುಂ'' - ಇತ್ಯಾದಿ ಕಾಷ್ಟ ಚೂರ್ಣರು ವಾದಿಸಿದರೆ; ನೀಲಾಂಬರಮ್ಮನವರು ''ಸುಲಿದ ಬಾಳೆಯಹಣ್ಣು... ಘೃತಮುಂ ತೈಲಮುಮಂ ಬೆರಸಲ್ತಕ್ಕುದೆ... ಕಾಗೆ ಹಂಸಕ್ಕೆ ತಾಳೀ ಕಟ್ಟಿದಂತೆ'' ಇತ್ಯಾದಿಯಾಗಿ ಬಾಯಿ ಬಡಿಯುವುದುಂಟು.

ಈ ತಿಕ್ಕಾಟ ಹೇಗಾದರೂ ಇರಲಿ. ಈ ಆದರ್ಶ ದಂಪತಿಗಳು ಕನ್ನಡ ಸಾಹಿತ್ಯ ಸೇವೆಯನ್ನು ಯಾವರೀತಿ ಮಾಡುತ್ತಿದ್ದಾರೆಂಬುದಕ್ಕೆ ಅವರ ಕಸಬೇ ಸಾಕ್ಷಿ. ಹುಡುಗತನದಿಂದಲೂ ಬಂದ ಬೈಲುನಾಟಕದ ಹುಚ್ಚನ್ನೇ ಕಸಬಾಗಿ ಮಾಡಿಕೊಂಡು ಶ್ರೀಮಾನ್ ಅವರು, ನೀಲಾಂಬರಮ್ಮನವರ ಕೈಹಿಡಿದ ಮೇಲಂತೂ ಅವರನ್ನೂ ರಂಗಕ್ಕೆಳೆದು ಅಳಿಸಲಾಗದಂಥ ಹೆಸರು ಗಳಿಸಿದ್ದಾರೆ. ನಮ್ಮ ದೇಶದ ಹಳ್ಳಿ ಹಳ್ಳಿಗಳಲ್ಲೂ ಈಗ ಬೈಲಟ್ಟದ ಮೇಲೆ ಕುಣಿದು ಕುಪ್ಪಳಿಸುವ ಹಳ್ಳಿ ಹೈದಗಳೆಲ್ಲಾ ಶ್ರೀಮಾನ್ ಕಾಷ್ಟಚೂರ್ಣರಿಗೆ ಚಿರ ಋಣಿಗಳಾಗಿರಬೇಕು. ಏಕೆಂದರೆ ಪುರಾತನ ಬೈಲುನಾಟಕ, ಯಕ್ಷಗಾನಗಳಿಗೆಲ್ಲಾ ಹೊಸ ಕಳೆಕೊಟ್ಟು ಹಳ್ಳಿಯ ಜನ ಸಮುದಾಯದ ಜೀವನ, ನಾಗರಿಕತೆಯ ಮಟ್ಟಕ್ಕೆ ಸರಿಯಾದ

ಕಥಾಗಮನ, ಸಂಭಾಷಣೆ, ಉಪಮಾನೋಪಮೇಯಗಳನ್ನು ಜೋಡಿಸಿ, ಸಾವಿರಾರು ಬೈಲಾಟದ ಪೈದಗಳ ಹೀರೋ ಆಗಿದ್ದಾರೆ. ಇಂದ್ರಸಭಾ ಎಂಬ ಪೌರಾಣಿಕ ಮಹಾ ನಾಟಕದಿಂದ ಹಿಡಿದು ಇವರ ಚಾತುರ್ಯ 'ಇಬ್ಬಂದಿ' ಎಂಬ ಸಾಮಾಜಿಕ ರಂಗನಾಟ್ಯದವರೆಗೂ ಎಡೆಬಿಡದೆ ಹಬ್ಬಿದೆ.

ಶ್ರೀಮೂರ್ತಿರವರ ಹಾಗೂ ತಾಳಿಕಟ್ಟಿಸಿಕೊಂಡವರ (ರಂಗಭೂಮಿಯಮೇಲೆ ಇವರು ಕಾಷ್ಟಚೂರ್ಣ ಹಾಗೂ ನೀಲಾಂಬರೀದೇವಿ ಯೆಂದು ಖ್ಯಾತಿವೆತ್ತಿದ್ದಾರೆ) ಸಂಭಾಷಣೆಗಳ ಸವಿಯುಣ್ಣಬೇಕಾದರೆ ಅವರೇ ಅಭಿನಯಿಸುವ (ಕ್ಷಮಿಸಿ, ಕುಣಿಯುವ) ಬೈಲಾಟಗಳನ್ನು ನೋಡಬೇಕು. ಉದಾಹರಣೆಗೆ ಕೆಲವು ಅಲಂಕಾರಿತ ಉಪಮಾನೋಪಮೇಯಗಳನ್ನು ನೋಡಿ. (ಇವು ನಮಗೆ ಸಿಕ್ಕಿದ ಒಂದು ಮನು ಸ್ಕ್ರಿಪ್ಟಿನಿಂದ ಆರಿಸಿದುವು.)

1. ಬೇಟೆಯಾಡಲು ಬಂದ ರಾಜಕುಮಾರನು ಕುರಿಕಾಯುವ ಮೋಹನಾಂಗಿಯನ್ನು ಕುರಿತು: ''ಎಲೈ ಊವಿನಂತಾ ಎಣ್ಣೇ... (ಅವಳು ಓರೆಗಣ್ಣಿನಿಂದ ನೋಡಿ ತನ್ನ ಮುಕಾರವಿಂದವನ್ನು ತೋರುವಳು) - ಅಯ್ಯೋ, ನಿನಗೆ ಒಂದೇ ಕಣ್ಣೇ!''

2. ಕೌರವ-ಮಂತ್ರಿಗೆ: ''ಎಲೈ ಮಂತ್ರೀ... ಇದೇಕ್ ಕಣ್‌ಕಣ್ ಬಿಟ್ಕೊಂಡ್ ಕುಂತ್ರೀ?''

   ಮಂತ್ರಿ: ''ಕೌರವ ಭೂಪ ... ಇದೇನಿದು ಉರಿಬಿಸಿಲಿನ ತಾಪ?''

   ಇದಾವ ರುಸಿವರ್ಯನ ಸಾಪ? ದಿನಕರನಿಗೇಕಿಂದು ಇಂತು ಕೋಪ?

3. ಅರ್ಜುನ ಕುಂತಿಗೆ (ತೀರ್ಥಯಾತ್ರೆಗೆ ಹೋಗುವ ಮುನ್ನ): ''ಮಾತೇ... ಇದೆಲ್ಲಾ ನಿನ್ನ ಸೊಸೆಯ ಕ್ಯಾತೆ''... ಇತ್ಯಾದಿ...


4. ಪ್ರಣಯಿಗಳ ಪ್ರೇಮಸಲ್ಲಾಪ: ''ಎಲೈ ಪ್ರಾಣೇಶ್ವರೀ, ಪ್ರೇಮಪಾಸಕ್ಕೊಳಗಾಗಿ ಎಣ್ಣಿನ ಹಿಂದೆ ದೌಡುತ್ತಿರುವ ಆ ಗಂಡು ಉಲ್ಲೆಯನ್ನು ನೋಡಿದೆಯಾ? ಅದರ ಬಾಲದಂತೆ ನನ್ನ ಹೃದಯವು ಡವಡವನೆ ಬಡಿದುಕೊಳ್ಳುತ್ತಿರುವುದನ್ನು ನೀನರಿಯೆಯಾ?...''

5. ''ಎಲ, ಎಲಾ ಮಾರುತೀ... ಪರದೇ ಹಿಂದ್ಯಾಕೆ ತೂರುತೀ?''... ಇತ್ಯಾದಿ ... ಇತ್ಯಾದಿ....

ಇಷ್ಟೇ ಅಲ್ಲದೆ ಕಾಷ್ಟಚೂರ್ಣ ನೀಲಾಂಬರಿದೇವಿಯವರು ದುಷ್ಯಂತ ಹಾಗೂ ಶಕುಂತಲೆಯ ಪಾತ್ರಗಳಲ್ಲಿ ಬೈಲಟ್ಟವನ್ನು ಅಲಂಕರಿಸಿದಾಗ ಅವರ ಸಂಭಾಷಣೆಗಳಿಗೂ, 'ಪ್ರಿಯಾವಸಂತವಿದೂ' ಎಂಬ ಶೋಕವರ್ಧಿನಿಗೂ

ಒನ್ಸ್‌ಮೋರ್ ಹಾಕದ ಚಪ್ಪಾಳೆಯಿಲ್ಲ, ಸಿಳ್ಳುಹಾಕದ ನಾಲಗೆಯಿಲ್ಲ. ಕಾಷ್ಟಚೂರ್ಣರ ಹರಿಬಸವೇಶ್ವರ ಪೋಷಿತ ನಾಟಕಮಂಡಲಿಯ ನಾಟಕವೆಂದರೆ ನಮ್ಮ ದೇಶದಲ್ಲಲ್ಲದೆ ಹೊರಗಡೆ ಕುಂಪಣಿ ಸೀಮೆಯಲ್ಲೂ ಜನ ಕಿಕ್ಕಿರಿಯುತ್ತೆ. ಬೈಲಿನಲ್ಲಾಡುವ ಆಟಗಳಾದ್ದರಿಂದ ಟಿಕೀಟಿಲ್ಲ.

ಈ ಆದರ್ಶ ದಂಪತಿಗಳು ವರ್ಷಾಕಾಲವೂ ದೇಶದ ಮೂಲೆ ಮೂಲೆಗಳನ್ನೂ ಸುತ್ತುತ್ತಾ ನಮ್ಮ ರೈತರ ಮನ ತಣಿಸುತ್ತಾರೆ. ಮಲಗಲಿಕ್ಕೆ ಆರಡಿ ಭೂಮಿ, ಒಂದು ದಿನದ ಭತ್ಯಾತಿಥ್ಯ ಸಿಕ್ಕಿದರೆ ಯಾವ ಗಲ್ಲಿಯಲ್ಲಿ ಬೇಕಾದರೂ ಝಂಡಾಹಾಕಿ ನಿಮ್ಮ ಗಲ್ಲಿಯ ಹುಡುಗರನ್ನೇ ಸೇರಿಸಿಕೊಂಡು ಬೆಳಗುತನಕ ಸಂಪೂರ್ಣ ರಾಮಾಯಣ ಮಾಡಿಬಿಡುತ್ತಾರೆ. ಗುರುಮನೆಯಿಂದ ಅನೇಕ ಸಾರಿ ಶಾಲು ಜೋಡಿಯೂ, ಇನ್ನೂ ಅನೇಕ ಹಿತಚಿಂತಕ ಮಹನೀಯರಿಂದ ಇತರ ಅಸಾಧಾರಣವಾದ ಬಿರುದು ಬಾವಲಿಗಳೂ ಬಂದಾಗ್ಯೂ, ನಮ್ಮ ಕಸಬಿನಿಂದ ನಿವೃತ್ತರಾಗದೆ ಅವಿಶ್ರಾಂತರಾಗಿ ಅಲೆಯುತ್ತಿದ್ದಾರೆ. ಕನ್ನಡ ಪರಿಷತ್ತಿನ ಅಧ್ಯಕ್ಷಪದವಿಗೆ, ಸಾಯುವ ಮೊದಲು, ಏರಿಬಿಡಬೇಕೆಂಬ ದುರಭಿಲಾಷೆ ಶ್ರೀಮಾನ್ ಕಾಷ್ಟಚೂರ್ಣರನ್ನು ಈಚೆಗೆ ಕಾಡಿಸುತ್ತಿರುವ ಮಹಾಜಾಡ್ಯ. 'ಇದೂ ಆಗಿಬಿಟ್ಟರೆ ನಮ್ಮ ದುರ್ಭಾಗ್ಯಕ್ಕೆ ಎಣೆಯಿಲ್ಲ'ವೆಂದು ಯಾರೋ ಪಾಪಿಸಾಹಿತಿ ಮೊನ್ನೆ ಗೊಣಗುತ್ತಿದ್ದ. ಕನ್ನಡ ಸಾಹಿತ್ಯದ ಹಿತೈಷಿಗಳಿಗೆಲ್ಲಾ ಭಗವಂತನು ಧೈರ್ಯ, ಸ್ಥೈರ್ಯಗಳನ್ನು ಕೊಟ್ಟು ಬಚಾಯಿಸಿ ಪಾರುಮಾಡಲೆಂದು ಚಾಮುಂಡೇಶ್ವರಿಯಲ್ಲಿ ನಮ್ಮ ಹಾರೈಕೆ.



Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010
Editor : M. SHIVAKUMAR